ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಮೀಸಲಾದ ಕನ್ನಡ ಮಾಸಪತ್ರಿಕೆ

# ಸಹಕಾರ

ಮಾಸಪತ್ರಿಕೆ

ಸಂಪುಟ : 7 । ಸಂಚಿಕೆ : 3 । ಮಾರ್ಚ್-2025 । ಪುಟಗಳು : 20 । ಬೆಲೆ : 25/-

ಕರ್ನಾಟಕ ರಾಜ್ಯ
ಸಹಕಾರ ಪತ್ತಿನ ಸಂಘಗಳ
ಮಹಾಮಂಡಳದ ಪ್ರಕಟಣೆ

## ಸಮಸ್ತ ಸಹಕಾರಿ ಬಂಧುಗಳಿಗೆ ಯುಗಾದಿ ಹಬ್ಬದ ಹಾರ್ದಿಕ ಶುಭಾಶಯಗಳು



**ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ನೂತನ ಅಧ್ಯಕ್ಷರಾಗಿ ಶ್ರೀ ಎಸ್. ಚಂದ್ರಶೇಖರ್, ಉಪಾಧ್ಯಕ್ಷರಾಗಿ ಶ್ರೀ ಧರೇಪ್ಪ ಎಂ. ಆಲಗೂರ ಆಯ್ಕೆ**




ಶ್ರೀ ಎಸ್. ಚಂದ್ರಶೇಖರ್
ಅಧ್ಯಕ್ಷರು





ಶ್ರೀ ಧರೇಪ್ಪ ಎಂ. ಆಲಗೂರ
ಉಪಾಧ್ಯಕ್ಷರು

## ವ್ಯಕ್ತಿಗತ ಪರಿಚಯ



**ಎಸ್. ಚಂದ್ರಶೇಖರ್ S/O ಶಿವನಂಜಪ್ಪ**
ನಂಬರ್ 01, ತೇಜಸ್ವಿ ನಿಲಯ, ಜಿ ಬ್ಲಾಕ್,
ರೋಟರಿ ಸ್ಕೂಲ್ ಹತ್ತಿರ, ದಟ್ಟಗಳ್ಳಿ
ಕನಕದಾಸ ನಗರ ಮೈಸೂರು–570023
ಮೊಬೈಲ್ ನಂ. 9448052945

| | |
|---|---|
| ಮಾಜಿ ಅಧ್ಯಕ್ಷರು | ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಕೇಂದ್ರ ಸಹಕಾರ ಸಗಟು ಮಾರಾಟ ಸಂಘ ನಿ (ಜನತಾ ಬಜಾರ್) ಮೈಸೂರು 2009 ರಿಂದ 2019<br>ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿ., ಮೈಸೂರು 2016 ರಿಂದ 2018 |
| ಉಪಾಧ್ಯಕ್ಷರು<br>ಅಧ್ಯಕ್ಷರು | ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್, ಮೈಸೂರು 2013 ರಿಂದ 2016<br>2016 ರಿಂದ 2019 |
| ಮಾಜಿ ನಿರ್ದೇಶಕರು | ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿಯಮಿತ ಬೆಂಗಳೂರು 2014 ರಿಂದ 2020 |
| ಮಾಜಿ ನಿರ್ದೇಶಕರು | ಕರ್ನಾಟಕ ರಾಜ್ಯ ಗ್ರಾಹಕರ ಮಹಾಮಂಡಳ ನಿಯಮಿತ ಬೆಂಗಳೂರು 2014ರಿಂದ 2019 |
| ಅಧ್ಯಕ್ಷರು | ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು<br>2014 ರಿಂದ 2016 ರವರೆಗೆ ಹಾಗೂ 2025 ರಿಂದ |
| ಸಂಸ್ಥಾಪಕರು<br>ಹಾಗೂ ಅಧ್ಯಕ್ಷರು | ಕರ್ನಾಟಕ ರಾಜ್ಯ ಲಿಕ್ಕರ್ ಮರ್ಚೆಂಟ್ಸ್ ಡೆವಲಪ್‌ಮೆಂಟ್ ಕೋ ಆಪರೇಟಿವ್ ಸೊಸೈಟಿ ನಿಯಮಿತ ಮೈಸೂರು 2020 ರಿಂದ ತಹಲ್ ವರೆಗೆ |

## ವ್ಯಕ್ತಿಗತ ಪರಿಚಯ



**ಧರೇಪ್ಪ ಮಹದೇವ ಆಲಗೂರ**
S/O ಮಹದೇವ
ಟಕ್ಕಳಕಿ, ಅಂಚೆ ಟಕ್ಕಳಕಿ,
ಜಮಖಂಡಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ
ಮೊಬೈಲ್ ನಂ. 9731030109

| | |
|---|---|
| ಹಾಲಿ ಉಪಾಧ್ಯಕ್ಷರು<br>ಹಾಗೂ ನಿರ್ದೇಶಕರು | ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು<br>2025 ರಿಂದ 2014 ರಿಂದ 2025 ರವರೆಗೆ |
| ಸಂಸ್ಥಾಪಕ ನಿರ್ದೇಶಕರು<br>ಹಾಗು ಹಾಲಿ ಅಧ್ಯಕ್ಷರು | ಜಮಖಂಡಿ ತಾಲ್ಲೂಕು ಶ್ರೀ ಪಾರ್ಶ್ವನಾಥ ಅಲ್ಪಸಂಖ್ಯಾತರ ಪತ್ತಿನ ಸಹಕಾರ ಸಂಘ ನಿ. ಜಮಖಂಡಿ, ಬಾಗಲಕೋಟೆ ಜಿಲ್ಲೆ. 1997 ರಿಂದ |
| ಅಧ್ಯಕ್ಷರು | ಅಲಗೂರ ತೋಟದ ವಸತಿ ಹಾಲು ಉತ್ಪಾದಕರ ಸಹಕಾರಿ ಸಂಘ ನಿ., ಜಂಬಗಿ, ಸಾವಳಗಿ, ಬಾಗಲಕೋಟೆ 2016 ರಿಂದ |
| ಮಾಜಿ ಅಧ್ಯಕ್ಷರು | ಕಟ್ಕಳಕಿ ಹಾಲು ಉತ್ಪಾದಕರ ಸಹಕಾರ ಸಂಘ ನಿ., ಕಟ್ಕಳಕಿ ಜಮಖಂಡಿ ಬಾಗಲಕೋಟೆ 2016 ರಿಂದ 2020ರವರೆಗೆ |

# ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು

## ಆಡಳಿತ ಮಂಡಳಿ



ಶ್ರೀ ಬಿ.ಎಲ್. ಲಕ್ಕೇಗೌಡರು
ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಸಂಸ್ಥಾಪಕ ಅಧ್ಯಕ್ಷರು



ಎಸ್. ಚಂದ್ರಶೇಖರ್
ಅಧ್ಯಕ್ಷರು



ಧರೇಪ್ಪ ಎಂ. ಆಲಗೂರ
ಉಪಾಧ್ಯಕ್ಷರು



ಸಿ.ಎಂ. ಮಾರೇಗೌಡ
ನಿರ್ದೇಶಕರು



ಡಾ. ಬಿ.ಡಿ. ಭೂಕಾಂತ
ನಿರ್ದೇಶಕರು



ಡಾ. ಸಂಜಯ ಪಂ. ಹೊಸಮಠ
ನಿರ್ದೇಶಕರು



ಕೆ.ಕೆ. ಮಹೇಂದ್ರ ಪ್ರಸಾದ್‌ಗೌಡ
ನಿರ್ದೇಶಕರು



ಎಂ.ಜೆ. ನರೇಂದ್ರಕುಮಾರ
ನಿರ್ದೇಶಕರು



ಕೆ. ಕೃಷ್ಣಮೂರ್ತಿ
ನಿರ್ದೇಶಕರು



ಜಿ. ಮಲ್ಲಿಕಾರ್ಜುನಯ್ಯ
ನಿರ್ದೇಶಕರು



ತಮ್ಮಣ್ಣ ಬಿ. ಕೆಂಚರಡ್ಡಿ
ನಿರ್ದೇಶಕರು



ಹೊನ್ನಯ್ಯ ವಿ. ಹಿರೇಮಠ
ನಿರ್ದೇಶಕರು



ಉಮೇಶ ಶಿ. ಬಾಳಿ
ನಿರ್ದೇಶಕರು



ರವೀಂದ್ರ ಪ್ರಲ್ಹಾದ ಕಲಬುರ್ಗಿ
ನಿರ್ದೇಶಕರು



ಡಾ. ನಾಗೇಂದ್ರ ಡಿ.ಎಲ್.
ನಿರ್ದೇಶಕರು



ವೈ. ಶ್ರೀನಿವಾಸಗೌಡ
ನಿರ್ದೇಶಕರು



ಜಗದೀಶ ಕಂದಿಕರೆ
ನಿರ್ದೇಶಕರು



ರಾಜೇಶ್ ಟಿ.
ನಿರ್ದೇಶಕರು



ಶಿವಕುಮಾರ ಬಸವರಾಜು ಬಾದವಾಡಗಿ
ನಿರ್ದೇಶಕರು



ಶಿವಾನಂದ ಬಸಪ್ಪ ನ್ಯಾಮಗೌಡ
ನಿರ್ದೇಶಕರು



ಹೆಚ್. ಅಶೋಕ್
ನಿರ್ದೇಶಕರು




ಚಂದ್ರಶೇಖರ್ ಕೋಲ್ಚಾರು
ನಿರ್ದೇಶಕರು



ಪ್ರಜ್ವಲ್ ಕೆ.ಎನ್.
ಮುಖ್ಯಕಾರ್ಯನಿರ್ವಹಣಾಧಿಕಾರಿ


**SAHAKARA VARTHA PATHRIKE KANNADA MONTHLY**
RNI-Reg No.KARKAN/2018/75796
Post Reg No.KA-BGW/1816/2025-27
Posting Date : 1 and 5 Every Month
Posted at : P/C RMS Bhavan, Bangalore PSO,
Blore-26 Published On : 28th of Previous Month
License to post without prepayment
PMG BG/WPP-405/2025-27




ಇಂದ : ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿಯಮಿತ
ಬೆಂಗಳೂರು ನಂ. 126 1ನೇ ಮುಖ್ಯರಸ್ತೆ, 2ನೇ ಅಡ್ಡರಸ್ತೆ, ಜೆಬಿ ಕಾವಲ್,
ರಾಜೀವ್‌ಗಾಂಧಿ ನಗರ, ನಂದಿನಿ ಲೇಔಟ್, ಬೆಂಗಳೂರು–560096

**Printed at : Biligiri Printers**
**Chamrajpet, Bengaluru - 18**

## ಸಂಪಾದಕೀಯ



ಎಸ್. ಚಂದ್ರಶೇಖರ್
ಅಧ್ಯಕ್ಷರು

ರಾಜ್ಯದಲ್ಲಿ ಪತ್ತಿನ ಸಹಕಾರ ಸಂಘಗಳ ಸೇವೆ ಶ್ಲಾಘನೀಯವಾಗಿದೆ. ಆರ್ಥಿಕವಾಗಿ ದುರ್ಬಲರಾಗಿರುವ ಜನರಿಗೆ ಸಹಕಾರ ಸಂಸ್ಥೆಗಳು ಸ್ವಾವಲಂಬಿ ಬದುಕು ಕಟ್ಟಿಕೊಳ್ಳಲು ನೆರವಾಗಿದೆ. ಮುಂದೆಯೂ ಇವುಗಳ ಸೇವೆ ವಿಸ್ತರಣೆಗೊಳ್ಳಬೇಕಾಗಿದೆ. ಜೊತೆಗೆ ಮತ್ತಷ್ಟು ಪತ್ತಿನ ಸಹಕಾರ ಸಂಘಗಳು ಆರಂಭಗೊಂಡು ಸದಸ್ಯ ಸೇವೆಗಳನ್ನು ನೀಡಬೇಕಾಗಿದೆ.

# ಪತ್ತಿನ ಮಹಾಮಂಡಳದ ಬೆಳವಣಿಗೆಗೆ ಎಲ್ಲರ ಸಹಕಾರ ಅಗತ್ಯ

ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ನೂತನ ಆಡಳಿತ ಮಂಡಳಿಗೆ ನಿರ್ದೇಶಕರುಗಳನ್ನಾಗಿ ಚುನಾಯಿಸಿದ ಪ್ರತಿನಿಧಿಗಳಿಗೆ ಮೊದಲಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ನೂತನ ಪದಾಧಿಕಾರಿಗಳ ಆಯ್ಕೆಗೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಸಹಕಾರ ಸಚಿವ ಕೆ.ಎನ್.ರಾಜಣ್ಣ ರವರು ಸೇರಿದಂತೆ ಹಿರಿಯ ಸಹಕಾರಿ ಮುಖಂಡರುಗಳಿಗೆ ಈ ಸಂದರ್ಭದಲ್ಲಿ ಕೃತಜ್ಞತೆಗಳನ್ನು ಆಡಳಿತ ಮಂಡಳಿ ಪರವಾಗಿ ಸಲ್ಲಿಸುತ್ತೇವೆ.

ಪತ್ತಿನ ಮಹಾಮಂಡಳದ ಮುಂದೆ ಪ್ರಮುಖ ಸವಾಲುಗಳಿವೆ. ಪತ್ತಿನ ಮಹಾಮಂಡಳವು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ಎಲ್ಲಾ ನೂತನ ನಿರ್ದೇಶಕರುಗಳ ಸಹಕಾರವು ಅಗತ್ಯವಿದೆ. ಮೊದಲಿನ ಲಯಕ್ಕೆ ತರುವ ಪ್ರಯತ್ನವಾಗಬೇಕಿದೆ. ಲೋಪದೋಷಗಳನ್ನು ಸರಿಪಡಿಸುವುದು ನಮ್ಮೆಲ್ಲರ ಜವಾಬ್ದಾರಿಯು ಆಗಿದೆ.

ರಾಜ್ಯದಲ್ಲಿ ಪತ್ತಿನ ಸಹಕಾರ ಸಂಘಗಳ ಸೇವೆ ಶ್ಲಾಘನೀಯವಾಗಿದೆ. ಆರ್ಥಿಕವಾಗಿ ದುರ್ಬಲರಾಗಿರುವ ಜನರಿಗೆ ಸಹಕಾರ ಸಂಸ್ಥೆಗಳು ಸ್ವಾವಲಂಬಿ ಬದುಕು ಕಟ್ಟಿಕೊಳ್ಳಲು ನೆರವಾಗಿದೆ. ಮುಂದೆಯೂ ಇವುಗಳ ಸೇವೆ ವಿಸ್ತರಣೆಗೊಳ್ಳಬೇಕಾಗಿದೆ. ಜೊತೆಗೆ ಮತ್ತಷ್ಟು ಪತ್ತಿನ ಸಹಕಾರ ಸಂಘಗಳು ಆರಂಭಗೊಂಡು ಸದಸ್ಯ ಸೇವೆಗಳನ್ನು ನೀಡಬೇಕಾಗಿದೆ.

ಹಾಗೆಯೇ, ಪತ್ತಿನ ಸಹಕಾರ ಸಂಘಗಳ ಬೆಳವಣಿಗೆಗೆ ಪೂರಕವಾಗಿ ಪತ್ತಿನ ಮಹಾಮಂಡಳವು ಮತ್ತಷ್ಟು ಕ್ರಿಯಾಶೀಲಗೊಂಡು ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವುದರ ಜೊತೆಗೆ ಪರಿಣಾಮಕಾರಿ ಸಹಕಾರ ಶಿಕ್ಷಣ, ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಉತ್ಸುಕವಾಗಿದೆ.

ಪತ್ತಿನ ಮಹಾಮಂಡಳದ ಸದಸ್ಯ ಸಂಸ್ಥೆಗಳು ನೀಡುವ ಸಲಹೆಗಳನ್ನು ಗೌರವಯುತವಾಗಿ ಸ್ವೀಕರಿಸಲಾಗುವುದಲ್ಲದೆ, ಅವುಗಳು ನೀಡುವ ಸಲಹೆಗಳನ್ನು ಪರಿಣಾಮಕಾರಿಯಾಗಿ ತ್ವರಿತವಾಗಿ ಅನುಷ್ಠಾನಗೊಳಿಸುವ ಕಾರ್ಯವನ್ನು ಜವಾಬ್ದಾರಿಯುತವಾಗಿ ನಿರ್ವಹಿಸಲು ಆಡಳಿತ ಮಂಡಳಿ ಸನ್ನದ್ದವಾಗಿದೆ. ನಿಮ್ಮೆಲ್ಲರ ಸಹಕಾರ–ಸಲಹೆ–ಸೂಚನೆಗಳು ನಿರಂತರವಾಗಿರಲಿ ಎಂದು ಆಶಿಸುತ್ತೇನೆ. ತಮಗೆಲ್ಲರಿಗೂ ಯುಗಾದಿ ಹಬ್ಬದ ಹಾರ್ದಿಕ ಶುಭಾಶಯಗಳು.

ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಮೀಸಲಾದ ಏಕಮಾತ್ರ ಕನ್ನಡ ಮಾಸಪತ್ರಿಕೆ

ಸಹಕಾರ

ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಪ್ರಕಟಣೆ

ಸಂಪಾದಕ ಮಂಡಳಿ

ಅಧ್ಯಕ್ಷರು / ಪ್ರಧಾನ ಸಂಪಾದಕರು :

ಶ್ರೀ ಎಸ್. ಚಂದ್ರಶೇಖರ್

ಕಾರ್ಯನಿರ್ವಾಹಕ ಸಂಪಾದಕರು:

ಸಂಪಾದಕರು :

ಪ್ರಜ್ವಲ್ ಕೆ.ಎನ್.

ಮುಖ್ಯಕಾರ್ಯನಿರ್ವಹಣಾಧಿಕಾರಿ

**ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು**

ನಂ. 126, 1ನೇ ಮುಖ್ಯರಸ್ತೆ, 2ನೇ ಅಡ್ಡರಸ್ತೆ ಜೆಬಿ ಕಾವಲ್, ರಾಜೀವ್‌ಗಾಂಧಿ ನಗರ, ನಂದಿನಿ ಲೇಔಟ್, ಬೆಂಗಳೂರು–560096

ದೂರವಾಣಿ ಸಂಖ್ಯೆ : 080–23564444 / 23464033 / 23464034

ಇ–ಮೇಲ್ : info@ksccsf.org, ksccsfltd@gmail.com, ವೆಬ್ : www.ksccsf.org

# ಸಹಕಾರ ಸಚಿವ ಕೆ.ಎನ್. ರಾಜಣ್ಣ ಅವರ ಅಧ್ಯಕ್ಷತೆಯಲ್ಲಿ ಸಹಕಾರ ಇಲಾಖಾಧಿಕಾರಿಗಳ ಸಭೆ

**ಬೆಂಗಳೂರು** : ನಗರದ ಸಹಕಾರ ಸಂಘಗಳ ನಿಬಂಧಕರ ಕಚೇರಿಯಲ್ಲಿ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆಯುವ ಸಹಕಾರ ಇಲಾಖಾ ಪ್ರಗತಿ ಪರಿಶೀಲನಾ ಸಭೆಗೆ ಪೂರ್ವಭಾವಿಯಾಗಿ ಸಹಕಾರ ಇಲಾಖೆ ಮತ್ತು ಸಹಕಾರ ಲೆಕ್ಕಪರಿಶೋಧನಾ ಇಲಾಖೆ ಹಾಗೂ ಉಗ್ರಾಣ ನಿಗಮದ ಅಧಿಕಾರಿಗಳ ಪ್ರಗತಿಪರಿಶೀಲನಾ ಸಭೆಯು ಸಹಕಾರ ಸಚಿವರಾದ ಕೆ.ಎನ್. ರಾಜಣ್ಣರವರ ಅಧ್ಯಕ್ಷತೆಯಲ್ಲಿ ನಡೆಯಿತು.

ಇಲಾಖೆಗೆ ಸಂಬಂಧಪಟ್ಟ ಅಭಿವೃದ್ಧಿ ಕಾರ್ಯಗಳು ಹಾಗೂ ಆಯವ್ಯಯಕ್ಕೆ ಸಂಬಂಧಿಸಿದ ವಿಚಾರಗಳ ಕುರಿತು ಸುಧೀರ್ಘವಾಗಿ ಸಚಿವರು ಇಲಾಖಾಧಿಕಾರಿಗಳೊಂದಿಗೆ ಚರ್ಚೆ ನಡೆಸಿದರು.

ಈ ಸಂದರ್ಭದಲ್ಲಿ ಸಹಕಾರ ಇಲಾಖೆಯ ಕಾರ್ಯದರ್ಶಿ ಡಾ. ಎಂ.ಎನ್. ಅಜಯ್‌ನಾಗಭೂಷಣ್, ಸಹಕಾರ ಸಂಘಗಳ ನಿಬಂಧಕರಾದ ಟಿ.ಎಚ್.ಎಂ. ಕುಮಾರ್, ಸಹಕಾರ ಸಚಿವರ ವಿಶೇಷಾಧಿಕಾರಿ ಜಿ.ಎಸ್. ರಮಣರೆಡ್ಡಿ, ಸಹಕಾರ ಲೆಕ್ಕಪರಿಶೋಧನೆ ಇಲಾಖೆ ನಿರ್ದೇಶಕರಾದ ಎಂ.ಡಿ. ಮಲ್ಲೂರ, ಅಪೆಕ್ಸ್ ಬ್ಯಾಂಕಿನ ಮುಖ್ಯಕಾರ್ಯನಿರ್ವಹಣಾಧಿಕಾರಿ ಎಂ.ಕೆ. ಜಗದೀಶ್, ಗ್ರಾಹಕರ ಸಹಕಾರ ಮಹಾಮಂಡಳದ ವ್ಯವಸ್ಥಾಪಕ ನಿರ್ದೇಶಕರಾದ ಕೆ.ಎಂ. ಆಶಾ, ಅಪರ ನಿಬಂಧಕರುಗಳಾದ ಕೆ.ಎಸ್. ನವೀನ್, ಹೆಚ್. ಬಾಲಶೇಖರ್, ಜಿ.ಎಂ. ರವೀಂದ್ರ, ಬಿ.ಆರ್. ಲಿಂಗರಾಜು ಜಂಟಿ ನಿಬಂಧಕರುಗಳಾದ ಕಲ್ಲಪ್ಪ ಓಬಣ್ಣಗೋಳ, ಎನ್. ವೆಂಕಟೇಶ್, ಪಿ. ಮಹೇಶ್, ಯಶಸ್ವಿನಿ, ನಿಬಂಧಕರ ಪತ್ರಾಂಕಿತ ಸಹಾಯಕರಾದ ವೈ.ಟಿ. ಅಶ್ವಿನಿ ಸೇರಿದಂತೆ ಹಿರಿಯ ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.





**ಸುಭಾಷಿತ :** ಬೆಚ್ಚನೆ ಮನೆ ಇರಲು ವೆಚ್ಚಕೆ ಹೊನ್ನಿರಲು ಇಚ್ಛೆಯನರಿವ ಸತಿಯಿರಲು ಸ್ವರ್ಗಕ್ಕೆ ಕಿಚ್ಚು ಹಚ್ಚೆಂದ ಸರ್ವಜ್ಞ – ಸರ್ವಜ್ಞ

ಸಹಕಾರ ವಾರ್ತಾ ಪತ್ರಿಕೆ ಚಂದಾದಾರರಾಗ ಬಯಸುವವರು ಚಂದಾ ಹಣವನ್ನು "ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು" ಇವರ ಹೆಸರಿಗೆ ಚೆಕ್ ಅಥವಾ ಡಿಡಿಯನ್ನು ಬರೆದು ಕಳುಹಿಸಬೇಕಾಗಿ ವಿನಂತಿ. - ಸಿ.ಇ.ಒ.

ಐದು ವರ್ಷಗಳ ಚಂದಾ: ರೂ : 1770/-

ಸೂಚನೆ :

ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅನಿಸಿಕೆ, ಅಭಿಪ್ರಾಯಗಳು ಆಯಾ ಬರಹಗಾರರದೇ ಆಗಿರುತ್ತದೆ ವಿನಃ ಪತ್ರಿಕೆ / ಮಹಾಮಂಡಳದ ವಿಚಾರಗಳಾಗಿರುವುದಿಲ್ಲ.

- ಸಂಪಾದಕರು,

ಸಹಕಾರ ವಾರ್ತಾ ಪತ್ರಿಕೆ.



## ಕೊಪ್ಪಳ ಜಿಲ್ಲೆ ಕುಕನೂರಿನಲ್ಲಿ ಸಹಕಾರ ಜಾಗೃತಿ ಸಮಾವೇಶ

# ಯುವಜನರಿಗೆ ಶಿಕ್ಷಣದಲ್ಲಿಯೇ ಸಹಕಾರ ಜಾಗೃತಿ ಮೂಡಿಸಲು ಸಚಿವ ಕೆ.ಎನ್. ರಾಜಣ್ಣ ಸಲಹೆ

## ಸಹಕಾರ ಕ್ಷೇತ್ರದಲ್ಲಿ ಯುವಜನರು ತೊಡಗಿಸಿಕೊಳ್ಳಲು ಸಚಿವ ಹೆಚ್.ಕೆ. ಪಾಟೀಲ ಕರೆ

**ಕೊಪ್ಪಳ :** ಜಿಲ್ಲೆಯ ಕುಕನೂರು ಪಟ್ಟಣದ ಎ.ಪಿ.ಎಂ.ಸಿ ಆವರಣದಲ್ಲಿ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ಬೆಂಗಳೂರು, ರಾಯಚೂರು, ಬಳ್ಳಾರಿ, ಕೊಪ್ಪಳ ಹಾಗೂ ವಿಜಯನಗರ ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟ, ಕೊಪ್ಪಳ ಜಿಲ್ಲಾ ಸಹಕಾರಿ ಯೂನಿಯನ್, ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್, ಸಹಕಾರ ಇಲಾಖೆ ಹಾಗೂ ಕುಕನೂರು ಮತ್ತು ಯಲಬುರ್ಗಾ ತಾಲ್ಲೂಕಿನ ವಿವಿಧ ಸಹಕಾರಿ ಸಂಘಗಳ ಸಂಯುಕ್ತ ಆಶ್ರಯದಲ್ಲಿ ಕಲ್ಯಾಣ ಕರ್ನಾಟಕದ ಪ್ರಾಂತ್ಯದಲ್ಲಿ ಸಹಕಾರ ಚಳವಳಿಯನ್ನು ಬಲಪಡಿಸುವ ಉದ್ದೇಶದಿಂದ ಜಾಗೃತಿ ಸಮಾವೇಶವನ್ನು ಆಯೋಜಿಸಲಾಗಿತ್ತು. ಜಿಲ್ಲೆಯ ಸಹಕಾರಿ ಮುಖಂಡರುಗಳು ಸಂಘಟನಾತ್ಮಕವಾಗಿ ಏರ್ಪಡಿಸಿದ್ದ ಈ ಸಮಾವೇಶವು ಹಿಂದುಳಿದ ಪ್ರದೇಶಗಳ ಜನರ ಆರ್ಥಿಕ, ಸಾಮಾಜಿಕ ಬೆಳಣಿಗೆಗೆ ಪೂರಕವಾದ ಮಾದರಿ ಸಮಾವೇಶವಾಗಿತ್ತು.

ಸಹಕಾರ ಜಾಗೃತಿ ಸಮಾವೇಶದ ಆರಂಭದಲ್ಲಿ ಗಣ್ಯರು, ಸಹಕಾರಿ ಮುಖಂಡರುಗಳು ಸಹಕಾರಿ ಪಿತಾಮಹ ಶಿದ್ದನಗೌಡ ಸಂಣರಾಮನಗೌಡ ಪಾಟೀಲ್‌ರವರ ಭಾವಚಿತ್ರಕ್ಕೆ ಪುಷ್ಪಾಚರಣೆ ಮಾಡಿ, ನಂತರ ಕಾರ್ಯಕ್ರಮವನ್ನು ವಿದ್ಯುಕ್ತವಾಗಿ ಉದ್ಘಾಟಿಸಿದರು.

ಸಹಕಾರ ಸಚಿವ ಕೆ.ಎನ್ ರಾಜಣ್ಣ ರವರು ಮಾತನಾಡುತ್ತಾ, ರಾಜ್ಯದ ಸಹಕಾರ ಚಳವಳಿಯ ಬೆಳವಣಿಗೆ ತೃಪ್ತಿಕರವಾಗಿದ್ದು, ಕೆಲವು ಹಿಂದುಳಿದ ಪ್ರದೇಶಗಳಲ್ಲಿ ಚಳವಳಿ ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸುವಂತಾಗಬೇಕು. ಇದಕ್ಕೆ ಸಹಕಾರಿಗಳ ಸಂಘಟನಾತ್ಮಕ ಪ್ರಯತ್ನ, ಬದ್ಧತೆ ಅತ್ಯಗತ್ಯ ಎಂದರು.

ಮುಂದಿನ ತಲೆಮಾರಿಗೆ ಸಹಕಾರ ಚಳವಳಿಯನ್ನು ಬಲಪಡಿಸಲು ಯುವ ಜನರಲ್ಲಿ ಜಾಗೃತಿ ಮೂಡಿಸಬೇಕಾದ ಅಗತ್ಯವಿದೆ. ಈ ನಿಟ್ಟಿನಲ್ಲಿ ಶಾಲಾ, ಕಾಲೇಜು ಹಂತಗಳಲ್ಲಿ ಸಹಕಾರ ವಿಷಯವನ್ನು ಪಠ್ಯಗಳಲ್ಲಿ ಅಳವಡಿಸಿ ವಿದ್ಯಾರ್ಥಿಗಳಿಗೆ ಅರಿವು ಮೂಡಿಸಲು ಸರ್ಕಾರ ಎಲ್ಲಾ ರೀತಿಯ ಪ್ರಯತ್ನಗಳನ್ನು ನಡೆಸುತ್ತಿದೆ ಎಂದರು.





ಇತ್ತೀಚಿನ ದಿನಗಳಲ್ಲಿ ಕೆಲವು ಕಿರು ಹಣಕಾಸು ಸಂಸ್ಥೆಗಳು ಸಾಲ ವಸೂಲಾತಿ ವಿಚಾರದಲ್ಲಿ ಕಿರುಕಳ ನೀಡುತ್ತಿರುವುದರಿಂದ ಸಾರ್ವಜನಿಕರಿಗೆ ತೊಂದರೆ ಆಗುತ್ತಿದೆ. ಇವುಗಳ ನಿವಾರಣೆಗೆ ಸೂಕ್ತ ಕಾಯ್ದೆ ತರಲು ಸರ್ಕಾರ ಮೊದಲ ಹಂತದಲ್ಲಿ ಸುಗ್ರೀವಾಜ್ಞೆ ತರಲು ರಾಜ್ಯಪಾಲರ ಅನುಮತಿಗೆ ಕಳುಹಿಸಿಕೊಟ್ಟಿದೆ ಎಂದರು.

ಸಹಕಾರಿ ಸಂಸ್ಥೆಗಳು ಜನರ ಸಂಸ್ಥೆಗಳು, ಇದು ಜನರ ಆರ್ಥಿಕ ಸ್ವಾವಲಂಬನೆಯ ಆಂದೋಲನವಾಗಿದೆ. ಆರ್ಥಿಕವಾಗಿ ಅಬಲರಾದ ಜನರನ್ನು ಮುಖ್ಯವಾಹಿನಿಗೆ ತರಲು ಅತ್ಯುತ್ತಮ ವೇದಿಕೆಯಾಗಿದೆ. ಎಲ್ಲ ವರ್ಗಗಳ ಜನರು ಸಹಕಾರ ಕ್ಷೇತ್ರದಲ್ಲಿ ಪಾಲ್ಗೊಂಡು ಲಭ್ಯವಿರುವ ಪ್ರಯೋಜನಗಳ ಫಲಾನುಭವಿಗಳಾಗಬೇಕು ಎಂದು ಸಲಹೆ ನೀಡಿದರು.

ಸಹಕಾರಿಗಳಲ್ಲಿ ಸಹಕಾರ ವಿಷಯದ ಕುರಿತು ಜಾಗೃತಿ ಮೂಡಿಸಲು ಹಮ್ಮಿಕೊಂಡಿರುವ ಇಂಥ ಸಹಕಾರ ಜಾಗೃತಿ ಸಮಾವೇಶಗಳು ಹೆಚ್ಚು-ಹೆಚ್ಚಾಗಿ ನಡೆಯಬೇಕು. ಇಂಥ ಸಮ್ಮೇಳನಗಳು ಪ್ರತಿ ಜಿಲ್ಲೆ ಮತ್ತು ತಾಲ್ಲೂಕು ಮಟ್ಟದಲ್ಲಿಯೂ ನಡೆಯಬೇಕು. ಕುಕನೂರಿನ ಸಹಕಾರಿ ಜಾಗೃತಿ ಸಮಾವೇಶದ ನಿರ್ಣಯಗಳನ್ನು ಜಾರಿ ಮಾಡುವಂತಹ ಕೆಲಸವನ್ನು ನಾವು ಕೈಗೊಳ್ಳುತ್ತೇವೆ ಎಂದು ಭರವಸೆ ನೀಡಿದರು.

ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಪ್ರವಾಸೋದ್ಯಮ ಇಲಾಖೆ ಸಚಿವರಾದ ಎಚ್.ಕೆ. ಪಾಟೀಲ ಅವರು ಸಹಕಾರ ವಾರಪತ್ರಿಕೆ ವಿಶೇಷ ಸಂಚಿಕೆಯನ್ನು ಬಿಡುಗಡೆಗೊಳಿಸಿದರು. ನಂತರ ಮಾತನಾಡಿದ ಅವರು, ಕಣಗಿನಹಾಳ ಗ್ರಾಮದಲ್ಲಿ ಮೊದಲ ಕೃಷಿ ಪತ್ತಿನ ಸಹಕಾರಿ ಸಂಘ ಪ್ರಾರಂಭವಾಯಿತು. ನಂತರ ದಿನಗಳಲ್ಲಿ ದೇಶದಲ್ಲಿ ವಿವಿಧ ಉದ್ದೇಶಗಳ ಸಹಕಾರಿ ಸಂಸ್ಥೆಗಳು ಪ್ರಾರಂಭಗೊಂಡು ತಮ್ಮ ವಿಶಿಷ್ಟ ಸೇವೆಗಳ ಮೂಲಕ ಸದಸ್ಯರ ಆರ್ಥಿಕ ಬೆಳವಣಿಗೆಗೆ ಶ್ರಮಿಸುತ್ತಿವೆ. ಇತ್ತೀಚಿನ ದಿನಗಳಲ್ಲಿ ಯುವಜನರು ಸಹಕಾರ ಕ್ಷೇತ್ರಕ್ಕೆ ಬರಲು ಹಿಂದೇಟು ಹಾಕುತ್ತಿದ್ದಾರೆ ಎಂದರು.

ಯುವ ಜನರಲ್ಲಿ ಸಹಕಾರ ಕ್ಷೇತ್ರದ ಕುರಿತು ಜನಜಾಗೃತಿ ಮೂಡಿಸುವುದು ನಮ್ಮೆಲ್ಲರ ಜವಾಬ್ದಾರಿ ಎಂದರು. ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಗಳು, ತುಳಿತಕ್ಕೆ ಒಳಗಾದ ಜನರು ಸಹಕಾರ ಕ್ಷೇತ್ರಕ್ಕೆ ಬರಬೇಕು. ಈ ಜನರು ಸದಸ್ಯರಾಗುವ ಸಹಕಾರ ಸಂಘಗಳಿಗೆ ಸರ್ಕಾರವೇ ಶೇರು ಹಣವನ್ನು ಭರಿಸುತ್ತದೆ. ಸಹಕಾರ ಸಂಘಗಳಲ್ಲಿ ಲಭ್ಯವಾಗುವ ಸೌಲಭ್ಯಗಳನ್ನು ಪಡೆದು ಆರ್ಥಿಕವಾಗಿ ಸಬಲರಾಗಬೇಕೆಂದರು.

ಹಿಂದುಳಿದ ವರ್ಗಗಳ ಕಲ್ಯಾಣ, ಕನ್ನಡ ಮತ್ತು ಸಂಸ್ಕೃತಿ ಹಾಗೂ ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವರಾದ ಶಿವರಾಜ ಎಸ್. ತಂಗಡಗಿ ಅವರು ಸಹಕಾರಿ ವಸ್ತು ಪ್ರದರ್ಶನ ಉದ್ಘಾಟಿಸಿದರು. ನಂತರ ಮಾತನಾಡಿದ ಅವರು ಸಹಕಾರ ಜಾಗೃತಿ ಸಮಾವೇಶವು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಪ್ರಯತ್ನ ನಡೆಸಿರುವುದು ಶ್ಲಾಘನೀಯ ಎಂದು ಜಿಲ್ಲೆಯ ಸಹಕಾರಿ ಮುಖಂಡರುಗಳನ್ನು ಅಭಿನಂದಿಸಿದರು. ಸಹಕಾರ ಸಂಸ್ಥೆಗಳಲ್ಲಿ ಎಲ್ಲಾ ವರ್ಗಗಳ ಜನರು ಸದಸ್ಯತ್ವ ಪಡೆದು ಪ್ರಯೋಜನಗಳನ್ನು ಪಡೆಯಬೇಕೆಂದು ಸಲಹೆ ನೀಡಿದರು.

ಜಾಗೃತಿ ಸಮಾವೇಶದ ರೂವಾರಿಗಳು ಹಾಗೂ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರರು ಹಾಗೂ ಶಾಸಕರಾದ ಬಸವರಾಜ ರಾಯರೆಡ್ಡಿ ಅವರು ಮಾತನಾಡಿ, ಇದು ಒಂದು ಐತಿಹಾಸಿಕ ಜಾಗೃತಿ ಸಮಾವೇಶವಾಗಿದೆ. ಸಹಕಾರಿ ಕ್ಷೇತ್ರದ ಅಭಿವೃದ್ಧಿಗಾಗಿ ಈ ಜಾಗೃತಿ ಸಮಾವೇಶವನ್ನು ಹಮ್ಮಿಕೊಳ್ಳಲಾಗಿದೆ.

ಮುಂಬೈ ಕರ್ನಾಟಕ ಭಾಗದಲ್ಲಿ ಅದಷ್ಟು ಸಹಕಾರಿ ಜಾಗೃತಿ ನಮ್ಮ ಕಲ್ಯಾಣ ಕರ್ನಾಟಕದ ಭಾಗದಲ್ಲಿ ಅಷ್ಟು ಜಾಗೃತಿ ಆಗಿಲ್ಲ. ಈ ದಿಸೆಯಲ್ಲಿ ಕುಕನೂರಿನಲ್ಲಿ ಈ ಜಾಗೃತಿ ಸಮಾವೇಶವನ್ನು ಹಮ್ಮಿಕೊಳ್ಳಲಾಗಿದೆ ಎಂದರು. ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಸಹಕಾರ ಕ್ಷೇತ್ರದಲ್ಲಿ ಮೊಟ್ಟಮೊದಲ ಆದ್ಯತೆ ದೊರೆಯಬೇಕು ಎಂದರು.

ಸಹಕಾರ ರಂಗ ಬೆಳೆದಾಗ ಮಾತ್ರ ರೈತರು ನೆಮ್ಮದಿಯಿಂದ ಇರಲು ಸಾಧ್ಯ, ಪ್ರತಿಯೊಂದು ಗ್ರಾಮದಲ್ಲಿ ಸಹಕಾರ ಸಂಘ ಇರಬೇಕು. ಸರ್ಕಾರ ಬಹಳ ಸೌಲಭ್ಯ ಕೊಡುತ್ತಿದೆ. ಅವುಗಳನ್ನು ಉಪಯೋಗ ಮಾಡಬೇಕು ಅಂದ್ರೆ, ಸಹಕಾರ ಸಂಘ ಬೆಳೆಯಬೇಕು. ಸಹಕಾರ ರಂಗ ಬೆಳೆಯಲು ಎಲ್ಲರ ಸಹಕಾರ ಬಹಳ ಮುಖ್ಯವಾಗಿದೆ ಎಂದರು. ಶಾಸಕರು ಹಾಗೂ ಸಹಕಾರ ಮಹಾಮಂಡಳದ ಅಧ್ಯಕ್ಷರಾದ ಜಿ.ಟಿ. ದೇವೇಗೌಡರ ಅನುಪಸ್ಥಿತಿಯಲ್ಲಿ ಶುಭ ಸಂದೇಶವನ್ನು ವಾಚಿಸಲಾಯಿತು.

**ಸಾಧಕರಿಗೆ ಸನ್ಮಾನ :** ಸಕಾರ ಕ್ಷೇತ್ರದಲ್ಲಿ ಶ್ರಮಿಸಿದ ಮಾಜಿ ಸಚಿವರಾದ ಎಸ್.ಎಸ್.ಪಾಟೀಲ್, ಹಿರಿಯ ಸಹಕಾರಿಗಳಾದ ರಾಘವೇಂದ್ರಚಾರ್ಯ ಜೋಶಿ, ಶಿದ್ದನಗೌಡ ಹೊರಪೇಟೆ, ಶ್ರೀಪಾದಪ್ಪ ಅಧಿಕಾರಿ, ಯಂಕಣ್ಣ ಯರಾಶಿ, ಕೆರಿಬಸಪ್ಪ ನಿಡಗುಂದಿ, ಬಸವರಾಜ ಉಳ್ಳಾಗಡ್ಡಿ, ಬಿ.ಎಮ್.ಶಿರೂರ ಅವರುಗಳನ್ನು ಸಮಾರಂಭದಲ್ಲಿ ಗೌರವಿಸಿ, ಸನ್ಮಾನಿಸಲಾಯಿತು. ವೇದಿಕೆಯ ಮೇಲೆ ಸಂಸದರಾದ ಕೆ.ರಾಜಶೇಖರ ಹಿಟ್ನಾಳ, ಮುನಿರಾಬಾದ್ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ ತುಂಗಭದ್ರಾ ಯೋಜನೆಯ ಅಧ್ಯಕ್ಷರಾದ ಹಸನಸಾಬ ನಭಿಸಾಬ ದೋಟಿಹಾಳ, ಮಾಜಿ ಸಚಿವರು ಕರ್ನಾಟಕ ರಾಜ್ಯ ಸಹಕಾರ ಎಣ್ಣೆ ಬೀಜ ಬೆಳೆಗಾರರ ಮಹಾಮಂಡಳದ ಅಧ್ಯಕ್ಷರಾದ ವೆಂಕಟರಾವ್ ನಾಡಗೌಡ, ಮಾಜಿ ಸಚಿವರಾದ ಅಮರೇಗೌಡ ಪಾಟೀಲ್ ಬಯ್ಯಾಪುರ, ರಾಯಚೂರು ಮತ್ತು ಕೊಪ್ಪಳ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ



ಅಧ್ಯಕ್ಷರಾದ ವಿಶ್ವನಾಥ ಪಾಟೀಲ ತೋರಣದಿನ್ನಿ, ರಾಯಚೂರು ಮತ್ತು ಕೊಪ್ಪಳ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನ ಉಪಾಧ್ಯಕ್ಷರಾದ ಶಿವಶಂಕರಗೌಡ ಪಾಟೀಲ್, ಕೊಪ್ಪಳ ಜಿಲ್ಲಾ ಸಹಕಾರ ಯೂನಿಯನ್ ಅಧ್ಯಕ್ಷರು ಹಾಗೂ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ನಿರ್ದೆಶಕರಾದ ಶೇಖರಗೌಡ ಮಾಲಿಪಾಟೀಲ, ರಾಯಚೂರು ಎಣ್ಣೆಬೀಜ ಬೆಳೆಗಾರರ ಸಹಕಾರ ಸಂಘಗಳ ಒಕ್ಕೂಟದ ಅಧ್ಯಕ್ಷರಾದ ಸುರೇಶರಡ್ಡಿ ಮಾದಿನೂರು, ಕೊಪ್ಪಳ ಮತ್ತು ಬಳ್ಳಾರಿ ಕಾಸ್ಕಾರ್ಡ ಬ್ಯಾಂಕಿನ ನಿರ್ದೇಶಕರಾದ ವೃಷಬೇಂದ್ರಯ್ಯ ಜೆ.ಎಮ್., ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ರಾಮ್ ಎಲ್ ಅರಸಿದ್ದಿ, ಉಪವಿಭಾಗಾಧಿಕಾರಿ ಕ್ಯಾಪ್ಟನ್ ಮಹೇಶ್ ಮಾಲಗಿತ್ತಿ, ಅಪರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹೇಮಂತ್ ಕುಮಾರ್, ಸಹಕಾರ ಮಹಾಮಂಡಳದ ಕಾರ್ಯದರ್ಶಿ ಹಾಗೂ ಅಪರ ನಿಬಂಧಕರಾದ ಲಕ್ಷ್ಮೀಪತಯ್ಯ, ಕಲಬುರಗಿ ಪ್ರಾಂತ್ಯ ಜಂಟಿ ನಿಬಂಧಕರಾದ ವಿಶ್ವನಾಥ ಮಲಕೋಡ, ಉಪನಿಬಂಧಕ ಸಜ್ಜನರ ಪ್ರಕಾಶ ಸೇರಿದಂತೆ ವಿವಿಧ ಇಲಾಖೆಗಳ ಹಾಗೂ ಸಹಕಾರ ಇಲಾಖೆಯ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

## ಬಡಗಬೆಟ್ಟು ಕ್ರೆಡಿಟ್ ಕೋ-ಆಪರೇಟಿವ್ ಸೊಸ್ಯಾಟಿಯಿಂದ ಶ್ರೀ ಕೃಷ್ಣ ಮಠದ ರಾಜಾಂಗಣದಲ್ಲಿ ಬೃಹತ್ ಉಚಿತ ಆರೋಗ್ಯ ತಪಾಸಣಾ ಶಿಬಿರ




ಪರ್ಯಾಯ ಶ್ರೀಕೃಷ್ಣಮಠದ ಆಶ್ರಯದಲ್ಲಿ ಬಡಗಬೆಟ್ಟು ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ ಹಾಗೂ ಲಯನ್ಸ್ ಕ್ಲಬ್ ಉಡುಪಿ ಇಂದ್ರಾಳಿ ಇವರ ಸಹಭಾಗಿತ್ವದಲ್ಲಿ ಕಸ್ತೂರ್ಬಾ ಆಸ್ಪತ್ರೆ ಮಣಿಪಾಲ, ಭಾರತೀಯ ವೈದ್ಯಕೀಯ ಸಂಘ ಉಡುಪಿ ಕರಾವಳಿ ಹಾಗೂ ಮಹಿಳಾ ವೈದ್ಯರ ಘಟಕ, ಇಂಡಿಯನ್ ಡೆಂಟಲ್ ಅಸೋಸಿಯೇಷನ್ ಹಾಗೂ ಎ.ಜೆ ಇನ್ಸಿಟ್ಯೂಟ್ ಆಫ್ ಡೆಂಟಲ್ ಸೈನ್ಸ್ ಇಲ್ಲಿನ ತಜ್ಞ ವೈದ್ಯರುಗಳ ಸಮ್ಮಿಲನದಲ್ಲಿ ಬೃಹತ್ ಉಚಿತ ಆರೋಗ್ಯ ತಪಾಸಣಾ ಶಿಬಿರವು ಶ್ರೀ ಕೃಷ್ಣ ಮಠದ ರಾಜಾಂಗಣದಲ್ಲಿ ಜರಗಿತು. ಶಿಬಿರವನ್ನು ಪರಮಪೂಜ್ಯ ಪರ್ಯಾಯ ಶ್ರೀಪಾದರಾದ ಪುತ್ತಿಗೆ ಸುಗುಣೇಂದ್ರ ತೀರ್ಥ ಸ್ವಾಮೀಜಿಯವರು ಉದ್ಘಾಟಿಸಿದರು.

"ಉತ್ತಮ ಆರೋಗ್ಯಕ್ಕಾಗಿ ಪೌಷ್ಟಿಕಾಂಶ ಆಹಾರದ ಅಗತ್ಯತೆ" ಎಂಬ ವಿಷಯದ ಕುರಿತು ಮಾಹಿತಿ ಕಾರ್ಯಗಾರ ನಡೆಯಿತು. ಎಲ್ಲಾ ತರಹದ ಆರೋಗ್ಯ, ದಂತ, ಕಣ್ಣಿನ ತಪಾಸಣೆ, ಮಧುಮೇಹ, ರಕ್ತದೊತ್ತಡ ಪರೀಕ್ಷೆ, ಗರ್ಭಕಂಠದ ಸ್ತ್ರೀಯರ ಪರೀಕ್ಷೆ, ಎಲುಬಿನ ಸಾಂದ್ರತೆ ಪರೀಕ್ಷೆಗಳನ್ನು ತಜ್ಞ ವೈದ್ಯರಿಂದ ನಡೆಸಲಾಯಿತು. ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಶಿಬಿರದ ಪ್ರಯೋಜನ ಪಡೆದುಕೊಂಡರು. ಕಾರ್ಯಕ್ರಮದಲ್ಲಿ ಬಡಗಬೆಟ್ಟು ಸೊಸೈಟಿಯ ಅಧ್ಯಕ್ಷರಾದ ಬಿ. ಜಯಕರ ಶೆಟ್ಟಿ ಇಂದ್ರಾಳಿ, ಪ್ರಧಾನ ವ್ಯವಸ್ಥಾಪಕರಾದ ರಾಜೇಶ್ ವಿ ಶೇರಿಗಾರ್, ಎ.ಜಿ.ಎಂ ಪ್ರವೀಣ್ ಕುಮಾರ್, ರತ್ನಾಕರ್ ಇಂದ್ರಾಳಿ ಇತರ ಪ್ರಮುಖರು ಉಪಸ್ಥಿತರಿದ್ದರು.

# ರಾಜ್ಯದ ಕೃಷಿಯೇತರ ಪತ್ತಿನ ಸಂಘಗಳ ಮುಂದಿನ ಐದು ವರ್ಷಗಳ ಬೆಳವಣಿಗೆ

**ವಿಶೇಷ ಸಂದರ್ಶನ : ಎಸ್.ಚಂದ್ರಶೇಖರ್, ಅಧ್ಯಕ್ಷರು, ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು**

**ಜನಕಲ್ಯಾಣ ಪ್ರಕಾಶನ ಸಂಸ್ಥೆಯು ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ನೂತನ ಅಧ್ಯಕ್ಷರಾದ ಶ್ರೀ ಎಸ್. ಚಂದ್ರಶೇಖರ್ ಅವರನ್ನು ಇತ್ತೀಚೆಗೆ ಸಂದರ್ಶಿಸಿತು. ವಿವರ ಕೆಳಕಂಡಂತೆ ಇದೆ.**



**ವರದಿಗಾರ : ಸ್ವಾಗತ, ಚಂದ್ರಶೇಖರ್ ಅವರೆ. ರಾಜ್ಯದ ಕೃಷಿಯೇತರ ಪತ್ತಿನ ಸಂಘಗಳ ಅಭಿವೃದ್ಧಿಗೆ ನಿಮ್ಮ ಮುಂದಿನ ಐದು ವರ್ಷದ ದೃಷ್ಟಿಕೋನವನ್ನು ಹಂಚಿಕೊಳ್ಳುತ್ತೀರಾ?**

**ಎಸ್. ಚಂದ್ರಶೇಖರ್ :** ಧನ್ಯವಾದಗಳು. ರಾಜ್ಯದ ಸಹಕಾರ ಪತ್ತಿನ ಸಂಘಗಳು ನಮ್ಮ ಆರ್ಥಿಕ ವ್ಯವಸ್ಥೆಯಲ್ಲಿ ಪ್ರಮುಖ ಪಾತ್ರವಹಿಸುತ್ತಿವೆ. ಕೃಷಿಯೇತರ ಪತ್ತಿನ ಸಂಘಗಳ ಅಭಿವೃದ್ಧಿಗೆ ನಾವು ಕೆಲವು ಪ್ರಮುಖ ಹೆಜ್ಜೆಗಳನ್ನು ಹಾಕಿದ್ದೇವೆ. ಮುಂದಿನ ಐದು ವರ್ಷಗಳಲ್ಲಿ, ಸಂಘಗಳ ವ್ಯವಸ್ಥಿತ ವೃದ್ಧಿಯನ್ನು ಸಾಧಿಸಲು ನಾವು ಈ ಕೆಳಗಿನ ಕ್ರಮಗಳನ್ನು ಕೈಗೊಳ್ಳಲಿದ್ದೇವೆ.

**ಡಿಜಿಟಲೀಕರಣ :** ಎಲ್ಲಾ ಪತ್ತಿನ ಸಂಘಗಳಲ್ಲಿ ಡಿಜಿಟಲ್ ಬ್ಯಾಂಕಿಂಗ್, ಆನ್‌ಲೈನ್ ಹಣಕಾಸು ಸೇವೆಗಳು, ಮತ್ತು ಸುಧಾರಿತ ಡೇಟಾ ನಿರ್ವಹಣಾ ವ್ಯವಸ್ಥೆಯನ್ನು ಅಳವಡಿಸುವ ಯೋಜನೆ ಇದೆ.

**ನೂತನ ಹಣಕಾಸು ಉತ್ಪನ್ನಗಳು :** ಸಣ್ಣ ಮತ್ತು ಮಧ್ಯಮ ಉದ್ಯಮಗಳಿಗೆ ಹಾಗೂ ಮಹಿಳಾ ಸ್ವ-ಸಹಾಯ ಗುಂಪುಗಳಿಗೆ ಪತ್ತಿನ ಸಂಘಗಳ ಮೂಲಕ ವಿಶೇಷ ಸಾಲ ಯೋಜನೆಗಳನ್ನು ಪರಿಚಯಿಸುವ ಉದ್ದೇಶವಿದೆ.

**ಆಡಳಿತ ಸುಧಾರಣೆ :** ಸಂಘಗಳ ಕಾರ್ಯಪದ್ಧತಿಯಲ್ಲಿ ಪಾರದರ್ಶಕತೆ ಮತ್ತು ಜವಾಬ್ದಾರಿಯನ್ನು ಹೆಚ್ಚಿಸಲು ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗುವುದು.

**ಸಹಕಾರ ಸಂಘಗಳ ವಿಸ್ತರಣೆ :** ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಕೃಷಿಯೇತರ ಸಹಕಾರ ಪತ್ತಿನ ಸಂಘಗಳ ನೆಲೆ ನಿಲ್ಲಿಸಿ, ಇತ್ತೀಚಿನ ಆರ್ಥಿಕ ಅವಶ್ಯಕತೆಗಳಿಗೆ ತಕ್ಕಂತೆ ಸೇವೆಗಳನ್ನು ಒದಗಿಸಲು ಕೆಲಸ ಮಾಡಲಾಗುವುದು.

**ಸಂಘಗಳ ಸಮೀಕ್ಷೆ ಮತ್ತು ಪ್ರಬಲ ನಿಯಂತ್ರಣ :** ಸಂಘಗಳ ಕಾರ್ಯಕ್ಷಮತೆಯನ್ನು ಮೇಲ್ವಿಚಾರಣೆ ಮಾಡಲು ನಿಯಂತ್ರಣ ವ್ಯವಸ್ಥೆಯನ್ನು ಬಲಪಡಿಸಲಾಗುವುದು.

**ವರದಿಗಾರ : ಪತ್ತಿನ ಸಂಘಗಳ ಸಾಮರ್ಥ್ಯವನ್ನು ಹೆಚ್ಚಿಸಲು ಸರ್ಕಾರದ ಸಹಾಯವನ್ನು ಹೇಗೆ ಬಳಸಿಕೊಳ್ಳಲು ಯೋಜಿಸುತ್ತೀರಿ?**

**ಎಸ್. ಚಂದ್ರಶೇಖರ್ :** ಸಹಕಾರ ವಲಯಕ್ಕೆ ಸರ್ಕಾರದಿಂದ ನೇರ ಸಹಾಯ ದೊರಕಲು ನಾವು ಸಕ್ರಿಯವಾಗಿ ನಿಲುಕಾಡುತ್ತಿದ್ದೇವೆ. ಸಹಕಾರ ಸಂಘಗಳ ಸುಧಾರಣೆ ಮತ್ತು ಬಲವರ್ಧನೆಗಾಗಿ ಸರ್ಕಾರದಿಂದ ಶ್ರೇಣಿಯ ಆರ್ಥಿಕ ನೆರವು, ನೀತಿಗಳ ಸರಳೀಕರಣ, ಮತ್ತು ತೆರಿಗೆ ಸೌಲಭ್ಯಗಳ ಅಗತ್ಯವಿದೆ. ಪತ್ತಿನ ಸಹಕಾರ ಮಹಾಮಂಡಳವು ಸರ್ಕಾರದೊಂದಿಗೆ ನಿರಂತರ ಚರ್ಚೆ ನಡೆಸುತ್ತಿದ್ದು, ನವೀನ ನೀತಿಗಳನ್ನು ರೂಪಿಸಲು ಪ್ರೇರೇಪಿಸುತ್ತಿದೆ.

**ವರದಿಗಾರ : ಸದಸ್ಯರಿಗೆ ಮತ್ತು ಆಡಳಿತ ಮಂಡಳಿಗೆ ನೀಡುವ ತರಬೇತಿಯ ಬಗ್ಗೆ ನೀವು ಏನನ್ನು ಹೇಳಲು ಇಚ್ಛಿಸುತ್ತೀರಿ?**

**ಎಸ್. ಚಂದ್ರಶೇಖರ್ :** ಸದಸ್ಯರ ಆರ್ಥಿಕ ಜ್ಞಾನವನ್ನು ವೃದ್ಧಿಸುವುದು ನಮ್ಮ ಪ್ರಮುಖ ಗುರಿಗಳಲ್ಲೊಂದಾಗಿದೆ. ಮುಂದಿನ ಐದು ವರ್ಷಗಳಲ್ಲಿ, ಪತ್ತಿನ ಸಂಘಗಳ ಆಡಳಿತ ಮಂಡಳಿ ಹಾಗೂ ಸದಸ್ಯರಿಗೆ ನಿರ್ವಹಣಾ ತರಬೇತಿ, ಹಣಕಾಸು ಪಾಠಶಾಲೆಗಳು, ಮತ್ತು ತಂತ್ರಜ್ಞಾನ ಬಳಕೆಯ ಕುರಿತು ವಿಶೇಷ ಕಾರ್ಯಾಗಾರಗಳನ್ನು ಆಯೋಜಿಸಲಾಗುವುದು.

**ವರದಿಗಾರ :** ಕೊನೆಯ ಪ್ರಶ್ನೆ, ಈ ಬೆಳವಣಿಗೆಯಲ್ಲಿ ಮುಖ್ಯ ಸವಾಲುಗಳಾವುದೆಂದು ಭಾವಿಸುತ್ತೀರಿ?

**ಎಸ್. ಚಂದ್ರಶೇಖರ್ :** ಸಹಕಾರ ಸಂಘಗಳ ಎದುರಿಸುತ್ತಿರುವ ಪ್ರಮುಖ ಸವಾಲುಗಳು – ವೃತ್ತಿಪರ ಆಡಳಿತದ ಕೊರತೆ, ತಂತ್ರಜ್ಞಾನ ದತ್ತೀಕರಣದ ವೇಗ, ಮತ್ತು ನಿತ್ಯ ಬದಲಾಗುತ್ತಿರುವ ಹಣಕಾಸು ನಿಯಮಾವಳಿಗಳು. ಈ ಸವಾಲುಗಳನ್ನು ಮೀರಿ, ಸಮಗ್ರ ಪ್ರಗತಿಯನ್ನು ಸಾಧಿಸಲು ನಮ್ಮ ಮಹಾಮಂಡಳ ಬದ್ಧವಾಗಿದೆ.

**ವರದಿಗಾರ : ಅತ್ಯಂತ ಮುಖ್ಯವಾದ ಮಾಹಿತಿಗಳನ್ನು ಹಂಚಿಕೊಂಡಿದ್ದಕ್ಕಾಗಿ ಧನ್ಯವಾದಗಳು.**

**ಎಸ್. ಚಂದ್ರಶೇಖರ್ :** ಧನ್ಯವಾದಗಳು, ಜನಕಲ್ಯಾಣ ಪ್ರಕಾಶನ ಮತ್ತು ಸಹಕಾರ ಪ್ರೇಮಿಗಳಿಗೆ ನನ್ನ ಹಾರ್ದಿಕ ಶುಭಾಶಯಗಳು.

ಈ ಸಂದರ್ಶನವು ರಾಜ್ಯದ ಸಹಕಾರ ಪತ್ತಿನ ಸಂಘಗಳ ಭವಿಷ್ಯದ ಕುರಿತು ಸ್ಪಷ್ಟ ಚಿತ್ರಣ ನೀಡುತ್ತದೆ. ಇದು ಸಹಕಾರ ಕ್ಷೇತ್ರದ ಅಭಿವೃದ್ಧಿಗೆ ಮಹತ್ವದ ಹಂತವಿರಲಿದೆ.

# ಶಿರಡಿಯಲ್ಲಿ ಅಂತರಾಷ್ಟ್ರೀಯ ಸಹಕಾರ ಸಮ್ಮೇಳನ

**ಶಿರಡಿ, ಫೆಬ್ರುವರಿ 9, 2025:** ಮಹಾರಾಷ್ಟ್ರ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ವತಿಯಿಂದ ಆಯೋಜಿಸಲಾದ ಅಂತರಾಷ್ಟ್ರೀಯ ಸಹಕಾರ ಸಮ್ಮೇಳನವು ಇಂದಿಗೆ ಐತಿಹಾಸಿಕ ಕ್ಷಣಕ್ಕೆ ಸಾಕ್ಷಿಯಾಯಿತು. ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು ನಿರ್ದೇಶಕರಾದ ಡಾ॥ ಸಂಜಯ್ ಪಂಚಾಕ್ಷರಿ ಹೊಸಮಠ ಇಂಗ್ಲೀಷ್ ಭಾಷೆಯಲ್ಲಿ ಬರೆದ "Credit Societies in Karnataka - A Co-operative Approach" ಪುಸ್ತಕವನ್ನು ಸಂಭ್ರಮದಿಂದ ಲೋಕಾರ್ಪಣೆ ಮಾಡಲಾಯಿತು.

ಈ ಪುಸ್ತಕವನ್ನು ರಾಜಸ್ಥಾನದ ರಾಜ್ಯಪಾಲರಾದ ಶ್ರೀ ಹರಿಬಾಹು ಬಾಗಡೇ ಅವರಿಂದ ಮಹಾರಾಷ್ಟ್ರ ರಾಜ್ಯ ಸಹಕಾರ ಮಂತ್ರಿಗಳಾದ ಶ್ರೀ ಬಾಬಾ ಸಾಹೇಬ್ ಪಾಟೀಲ್ ಅವರ ಉಪಸ್ಥಿತಿಯಲ್ಲಿ ಲೋಕಾರ್ಪಣೆ ಮಾಡಲಾಯಿತು.

ಈ ಸಂದರ್ಭದಲ್ಲಿ ಶ್ರೀ ಸತೀಶ್ ಮರಾಠೆ, ನಿರ್ದೇಶಕರು, ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಡಾ. ಉದಯ್ ಜೋಶಿ, ರಾಷ್ಟ್ರೀಯ ಅಧ್ಯಕ್ಷರು, ಸಹಕಾರ ಭಾರತೀ, ನವದೆಹಲಿಯ ಶ್ರೀ ಕಾಕಾ ಸಾಹೇಬ್ ಕೊಯ್ತೆ, ಅಧ್ಯಕ್ಷರು, ಮಹಾರಾಷ್ಟ್ರ ರಾಜ್ಯ ಪತ್ತಿನ ಮಹಾಮಂಡಳ ಮತ್ತು ರಾಷ್ಟ್ರದ ಪ್ರಮುಖ ಗಣ್ಯರು ಉಪಸ್ಥಿತರಿದ್ದರು.

ಈ ಮಹತ್ವದ ಕಾರ್ಯಕ್ರಮದಲ್ಲಿ ಶ್ರೀಲಂಕಾ, ಥೈಲ್ಯಾಂಡ್, ಫಿಲಿಪ್ಪೀನ್ಸ್, ಮತ್ತು ಮೋರೀಶಿಯಸ್‌ನ ಅಂತರರಾಷ್ಟ್ರೀಯ ಸಹಕಾರಿಗಳು ಹಾಗೂ ದೇಶದ ನಾನಾ ರಾಜ್ಯಗಳಿಂದ ಆಗಮಿಸಿದ್ದ ಸುಮಾರು 10,000ಕ್ಕೂ ಹೆಚ್ಚು ಸಹಕಾರ ಸಂಘಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

ಡಾ. ಸಂಜಯ ಪಿ ಹೊಸಮಠರವರ ಈ ಕೃತಿ ಕರ್ನಾಟಕದ ಸಹಕಾರ ಚಲನೆಯ ವೈಶಿಷ್ಟ್ಯವನ್ನು ಹಾಗೂ ಅದರ ಯಶಸ್ವಿ ಮಾದರಿಗಳನ್ನು ವಿಶ್ಲೇಷಿಸುತ್ತದೆ. ಇದರಲ್ಲಿ ಮೂಡಲಗಿಯಂತಹ 'ಸಹಕಾರ ನಗರಿ'ಯ ವಿಶೇಷತೆಯನ್ನು ಪ್ರಸ್ತುತಪಡಿಸಲಾಗಿದ್ದು, ಅಕಾಡಮಿಕ್ ವಿಶ್ಲೇಷಣೆ, ಕೇಸ್ ಸ್ಟಡಿಗಳು ಮತ್ತು ಸ್ಥಳೀಯ ಸಹಕಾರ ನಾಯಕರ ಸಂದರ್ಶನಗಳ ಮೂಲಕ ಗ್ರಾಮೀಣಾಭಿವೃದ್ಧಿ ಮತ್ತು ಆರ್ಥಿಕ ಒಳಗೊಳ್ಳುವಿಕೆಯಲ್ಲಿ ಪತ್ತಿನ ಸಂಘಗಳ ಪಾತ್ರವನ್ನು ಪರಿಚಯಿಸಲಾಗಿದೆ.

ಪುಸ್ತಕ ಬಿಡುಗಡೆ ಸಂದರ್ಭದಲ್ಲಿ ಮಾತನಾಡಿದ ಡಾ. ಸಂಜಯ ಪಿ. ಹೊಸಮಠ ಅವರು, "ಈ ಪುಸ್ತಕವು ಕೇವಲ ಕರ್ನಾಟಕದ ಸಹಕಾರ ಚರಿತ್ರೆಯ ಪ್ರತಿಬಿಂಬವಷ್ಟೇ ಅಲ್ಲ, ಸಹಕಾರ ಚಲನೆಯ ಸಮಗ್ರತೆ ಮತ್ತು ಪ್ರೇರಣೆಯನ್ನು ಜಾಗತಿಕ ಮಟ್ಟದಲ್ಲಿ ಹೆಚ್ಚಿಸುವ ಪ್ರಯತ್ನವಾಗಿದೆ. ಈ ಕೃತಿ ಜಾಗತಿಕ ಸಹಕಾರ ಚಲನೆಯನ್ನು ಮತ್ತಷ್ಟು ಬಲಪಡಿಸಲಿ ಎಂಬುದು ನನ್ನ ಆಶಯ," ಎಂದು ಹೇಳಿದರು.

ಗಣ್ಯರ ಮಾತುಗಳು ಈ ಪುಸ್ತಕದ ಮಹತ್ವವನ್ನು ಇತ್ತೀಚಿನ ಮತ್ತು ಭವಿಷ್ಯ ಸಹಕಾರ ಚಟುವಟಿಕೆಗಳಿಗೆ ಮಾರ್ಗದರ್ಶಿಯಾಗಿ ಸ್ವೀಕರಿಸಿದರು. ರಾಜ್ಯಪಾಲರು ಮತ್ತು ಸಹಕಾರ ಸಚಿವರು ಡಾ. ಹೊಸಮಠರಿಗೆ ಅಭಿನಂದನೆ ಸಲ್ಲಿಸಿ, ರಾಜ್ಯ ಮತ್ತು ರಾಷ್ಟ್ರಗಳ ನಡುವೆ ಇನ್ನಷ್ಟು ಸಹಕಾರ ಮುನ್ನೋಟವನ್ನು ಹಂಚಿಕೊಳ್ಳುವ ಅಗತ್ಯವನ್ನು ಒತ್ತಿಹೇಳಿದರು.

"Credit Societies in Karnataka – A Co-operative Approach" ಪುಸ್ತಕವು ಸಹಕಾರ ಚಲನೆಯಲ್ಲಿ ಹೊಸ ಚಟುವಟಿಕೆಗಳಿಗೆ ದಾರಿ ತೋರಿಸುವ ಮಹತ್ವದ ಕೃತಿಯಾಗಿ ಹೊರಹೊಮ್ಮಲಿದೆ.

**ಹೆಚ್ಚಿನ ಮಾಹಿತಿಗಾಗಿ :**

**ಡಾ. ಸಂಜಯ ಪಂಚಾಕ್ಷರಿ ಹೊಸಮಠ**

## ಶಿರಡಿ ಅಂತರಾಷ್ಟ್ರೀಯ ಸಹಕಾರ ಸಮಾವೇಶದಲ್ಲಿ ಡಾ ಸಂಜಯ ಪಂಚಾಕ್ಷರಿ ಹೊಸಮಠ ಬರೆದ ಕೃತಿ ಬಿಡುಗಡೆ





ರಾಜಸ್ಥಾನದ ಗೌರವಾನ್ವಿತ ರಾಜ್ಯಪಾಲ ಶ್ರೀ ಹರಿಭಾವು ಬಾಗಡೆ ಮತ್ತು ಮಹಾರಾಷ್ಟ್ರದ ಸಹಕಾರ ಸಚಿವ ಶ್ರೀ ಬಾಬಾಸಾಹೇಬ್ ಪಾಟೀಲ್ ಮತ್ತು ಮಹಾರಾಷ್ಟ್ರ ಕ್ರೆಡಿಟ್ ಸೊಸೈಟೀಸ್ ಫೆಡರೇಶನ್ ಅಧ್ಯಕ್ಷ ಶ್ರೀ ಕಾಕಾ ಸಾಹೇಬ್ ಕೊಯಾಟೆ ಅವರೊಂದಿಗೆ ಡಾ. ಸಂಜಯ ಪ. ಹೊಸಮಠ



## ಅಂತರಾಷ್ಟ್ರೀಯ ಸಹಕಾರಿ ಪ್ರತಿನಿಧಿಗಳೊಂದಿಗೆ



ಭಾರತೀಯ ರಿಸರ್ವ್ ಬ್ಯಾಂಕ್ ನಿರ್ದೇಶಕ ಶ್ರೀ ಸತೀಶ್ ಮರಾಠೆ ಮತ್ತು ಸಹಕಾರ ಭಾರತಿ ರಾಷ್ಟ್ರೀಯ ಅಧ್ಯಕ್ಷ ಡಾ. ಉದಯ್ ಜೋಶಿ ಅವರೊಂದಿಗೆ ಡಾ. ಸಂಜಯ ಪ. ಹೊಸಮಠ



ಸಮಾವೇಶದಲ್ಲಿ ಭಾಗಿಯಾದ ಬೃಹತ್ ಸಹಕಾರ ಜನಸ್ತೋಮ

# ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು

## ಇದರ ನೂತನ ಆಡಳಿತಮಂಡಳಿ

ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಮಹಾಮಂಡಳದ ಚುನಾವಣೆಯು ದಿನಾಂಕ : 28.01.2025ರಂದು ನಡೆದಿದ್ದು ಮುಂದಿನ ಐದು ವರ್ಷಗಳ ಅವಧಿಗೆ ಆಡಳಿತಮಂಡಳಿ ಸದಸ್ಯರುಗಳು ಆಯ್ಕೆಯಾಗಿರುತ್ತಾರೆ. ದಿನಾಂಕ : 13.02.2025ರಂದು ನಡೆದ ಪದಾಧಿಕಾರಿಗಳ ಚುನಾವಣೆಯಲ್ಲಿ ಶ್ರೀ ಎಸ್. ಚಂದ್ರಶೇಖರ್ ರವರು ಅಧ್ಯಕ್ಷರಾಗಿ ಹಾಗೂ ಶ್ರೀ ಧರೇಪ್ಪ ಮಹದೇವ ಆಲಗೂರರವರು ಉಪಾಧ್ಯಕ್ಷರಾಗಿ ಆಯ್ಕೆಯಾಗಿರುತ್ತಾರೆ. – ಕಿರುಪರಿಚಯ



**ಶ್ರೀ ಎಸ್. ಚಂದ್ರಶೇಖರ್**

**ಅಧ್ಯಕ್ಷರು**

ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು ಹಾಗೂ ಅಧ್ಯಕ್ಷರು, ಶ್ರೀಕಂಠೇಶ್ವರ ವಿವಿದೋದ್ದೇಶಗಳ ಸಹಕಾರ ಸಂಘ ನಿ., ನಂ.14, ವಿಶ್ವೇಶ್ವರ ಭವನ, ಕೆ.ಆರ್.ಸರ್ಕಲ್, ಮೈಸೂರು



**ಶ್ರೀ ಧರೇಪ್ಪ ಮಹದೇವ ಆಲಗೂರ**

**ಉಪಾಧ್ಯಕ್ಷರು**

ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು ಹಾಗೂ ಅಧ್ಯಕ್ಷರು, ಜಮಖಂಡಿ ತಾಲ್ಲೂಕು ಶ್ರೀ ಪಾರ್ಶ್ವನಾಥ ಅಲ್ಪ ಸಂಖ್ಯಾತರ ಪತ್ತಿನ ಸಹಕಾರ ಸಂಘ ನಿ. ಮೋತಿ ಫ್ಲಾಟ್, ಜಮಖಂಡಿ–587301 ಜಮಖಂಡಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ.



**ಶ್ರೀ ಸಿ.ಎಂ. ಮಾರೇಗೌಡ**

**ನಿರ್ದೇಶಕರು**

ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು ಹಾಗೂ ಅಧ್ಯಕ್ಷರು, ಕಾಮಧೇನು ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿಮಿಟೆಡ್., ನಂ.16, 2ನೇ ಮಹಡಿ, 80 ಅಡಿ ರಸ್ತೆ, ಕೆಂಗೇರಿ ಉಪನಗರ, ಬೆಂಗಳೂರು–560060



**ಡಾ. ಬಿ.ಡಿ. ಭೂಕಾಂತ**

**ನಿರ್ದೇಶಕರು**

ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು ಹಾಗೂ ನಿರ್ದೇಶಕರು, ಶ್ರೀ ಸಿದ್ದರಾಮೇಶ್ವರ ಕೈಗಾರಿಕಾ ಪತ್ತಿನ ಸಹಕಾರ ಸಂಘ ನಿ.,ಬಸವೇಶ್ವರ ಕಾಂಪ್ಲೆಕ್ಸ್, ಎಸ್.ಎಸ್. ರಸ್ತೆ, ಶಿಕಾರಿಪುರ – 577427 ಶಿಕಾರಿಪುರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ



**ಡಾ॥ ಸಂಜಯ ಪಿ. ಹೊಸಮಠ**

**ನಿರ್ದೇಶಕರು**

ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು ಹಾಗೂ ಮಾಜಿ ಅಧ್ಯಕ್ಷರು ಹಾಗೂ ಹಾಲಿ ನಿರ್ದೇಶಕರು, ಶ್ರೀ ಜಗದ್ಗುರು ಪಂಚಾಚಾರ್ಯ ಅರ್ಬನ್ ಕೋ–ಆಪ್ ಕ್ರೆಡಿಟ್ ಸೊಸಾಯಿಟಿ ಲಿ., ಹೈಸ್ಕೂಲ್ ರಸ್ತೆ, ಗೋಕಾಕ–591307 ಗೋಕಾಕ ತಾಲ್ಲೂಕು, ಬೆಳಗಾವಿ ಜಿಲ್ಲೆ.



**ಶ್ರೀ ಕೆ.ಕೆ. ಮಹೇಂದ್ರಪ್ರಸಾದ್ ಗೌಡ,**

**ನಿರ್ದೇಶಕರು**

ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು ಹಾಗೂ ಅಧ್ಯಕ್ಷರು, ಜನಹಿತ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ ನಂ.53, 10ನೇ ಅಡ್ಡರಸ್ತೆ, 2ನೇ ಮುಖ್ಯರಸ್ತೆ, ಪಶ್ಚಿಮ ಕಾರ್ಡರಸ್ತೆ, 2ನೇ ಹಂತ, ಮಹಾಲಕ್ಷ್ಮೀಪುರ, ಬೆಂಗಳೂರು–560086



**ಶ್ರೀ ಎಂ.ಜಿ. ನರೇಂದ್ರಕುಮಾರ ನಿರ್ದೇಶಕರು**

ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು ಹಾಗೂ ನಿರ್ದೇಶಕರು, ಯಶವಂತಪುರ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ ನಂ.61, 7ನೇ ಮುಖ್ಯರಸ್ತೆ, ಗೋಕುಲ 1ನೇ ಹಂತ, 2ನೇ ಮುಖ್ಯರಸ್ತೆ, ಯಶವಂತಪುರ ಬೆಂಗಳೂರು–560022



**ಶ್ರೀ ಕೆ.ಕೃಷ್ಣಮೂರ್ತಿ**

**ನಿರ್ದೇಶಕರು**

ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು ಹಾಗೂ ಉಪಾಧ್ಯಕ್ಷರು, ಕಾಮಧೇನು ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ., ನಂ.18/1, ವೆಂಕಟಪ್ಪ ಬಿಲ್ಡಿಂಗ್, ಐಡಿಬಿಐ ಬ್ಯಾಂಕ್ ಹತ್ತಿರ, ಬಿ.ಎಂ.ರೋಡ್, ಬಿಡದಿ-562109 ರಾಮನಗರ ತಾಲ್ಲೂಕು, ರಾಮನಗರ ಜಿಲ್ಲೆ



**ಶ್ರೀ ಜಿ. ಮಲ್ಲಿಕಾರ್ಜುನಯ್ಯ**

**ನಿರ್ದೇಶಕರು**

ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು ಹಾಗೂ ನಿರ್ದೇಶಕರು, ತುಮಕೂರು ಬಸವೇಶ್ವರ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಅಶೋಕ ರಸ್ತೆ, ತುಮಕೂರು-572101 ತುಮಕೂರು ತಾಲ್ಲೂಕು, ತುಮಕೂರು ಜಿಲ್ಲೆ.



**ಶ್ರೀ ತಮ್ಮಣ್ಣ ಬಾಲಪ್ಪ ಕೆಂಚರಡ್ಡಿ**

**ನಿರ್ದೇಶಕರು**

ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು ಹಾಗೂ ಅಧ್ಯಕ್ಷರು, ಚೈತನ್ಯ ಅರ್ಬನ್ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್ ಮೂಡಲಗಿ-591312, ಗೋಕಾಕ ತಾಲ್ಲೂಕು, ಬೆಳಗಾವಿ ಜಿಲ್ಲೆ



**ಶ್ರೀ ಉಮೇಶ್ ಶಿ ಬಾಳಿ**

**ನಿರ್ದೇಶಕರು**

ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು ಹಾಗೂ ನಿರ್ದೇಶಕರು, ದಿ ಮುನವಳ್ಳಿ ಅರ್ಬನ್ ಕೋ-ಆಪರೇಟಿವ್ ಕ್ರೆಡಿಟ್ ಸೊಸಾಯಿಟಿ ನಿ., ಮುನವಳ್ಳಿ-591117 ಸವದತ್ತಿ ತಾಲ್ಲೂಕು, ಬೆಳಗಾವಿ ಜಿಲ್ಲೆ



**ಶ್ರೀ ಹೊನ್ನಯ್ಯ ವೀ ಹಿರೇಮಠ**

**ನಿರ್ದೇಶಕರು**


ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು ಹಾಗೂ ಅಧ್ಯಕ್ಷರು, ಶ್ರೀ ಮಹಾಕೋಟೇಶ್ವರ ಪತ್ತಿನ ಸಹಕಾರ ಸಂಘ ನಿ ಬಾದಾಮಿ ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ್ ಹಿಂದುಗಡೆ, ಡಾ॥ ಎಚ್.ಎಸ್. ಗಾಣಿಗೇರ ಬಿಲ್ಡಿಂಗ್, ಆನಂದನಗರ, ಸ್ಟೇಷನ್ ರೋಡ್, ಬಾದಾಮಿ-587201 ಬಾದಾಮಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ.



**ಶ್ರೀ ರವೀಂದ್ರ ಪ್ರಲ್ಹಾದ ಕಲಬುರ್ಗಿ**

**ನಿರ್ದೇಶಕರು**


ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು ಹಾಗೂ ಅಧ್ಯಕ್ಷರು, ಶ್ರೀ ಗಾಯತ್ರಿ ಪತ್ತಿನ ಸಹಕಾರ ಸಂಘ ನಿ ಸೂಳೆಭಾವಿ-587124, ಹುನಗುಂದ ತಾಲ್ಲೂಕು, ಬಾಗಲಕೋಟೆ ಜಿಲ್ಲೆ



**ಡಾ॥ ನಾಗೇಂದ್ರ ಡಿ.ಎಲ್.**

**ನಿರ್ದೇಶಕರು**

ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು ಹಾಗೂ ಅಧ್ಯಕ್ಷರು, ನಂದಿನಿ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ನಿ., ನಂ.6/6, ಮೊದಲನೇ ಮಹಡಿ, ಸರಸ್ವತಿಪುರ ಮುಖ್ಯರಸ್ತೆ, ಗಣೇಶ ಬ್ಲಾಕ್, ನಂದಿನಿ ಬಡಾವಣೆ, ಬೆಂಗಳೂರು-560096



**ಶ್ರೀ ವೈ. ಶ್ರೀನಿವಾಸಗೌಡ**

**ನಿರ್ದೇಶಕರು**

ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು ಹಾಗೂ ಅಧ್ಯಕ್ಷರು, ಲೋಕಪಾವನಿ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್ ನಂ.23, 1ನೇ ಮಹಡಿ, 1ನೇ ಮುಖ್ಯರಸ್ತೆ, ಬಿ.ಎಸ್.ಕೆ 1ನೇ ಹಂತ, ನಾಗೇಂದ್ರ ಬ್ಲಾಕ್, ಬೆಂಗಳೂರು-560050



**ಶ್ರೀ ಜಗದೀಶ ಕಂದಿಕರೆ**

**ನಿರ್ದೇಶಕರು**

ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು ಹಾಗೂ ಅಧ್ಯಕ್ಷರು ಹಾಗೂ ಶ್ರೀ ಕೆಂಪೇಗೌಡ ಪತ್ತಿನ ಸಹಕಾರ ಸಂಘ ನಿ., ಪ್ರಧಾನ ರಸ್ತೆ, ಕೆನರಾಬ್ಯಾಂಕ್ ಮುಂಭಾಗ, ಸಿದ್ನಾಯಕ ಬಿಲ್ಡಿಂಗ್, ಹಿರಿಯೂರು-577598 ಹಿರಿಯೂರು ತಾಲ್ಲೂಕು, ಚಿತ್ರದುರ್ಗ ಜಿಲ್ಲೆ



**ಶ್ರೀ ರಾಜೇಶ್ ಟಿ.**

**ನಿರ್ದೇಶಕರು**

ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು ಹಾಗೂ ನಿರ್ದೇಶಕರು, ಶ್ರೀ ದೇವರ ದಾಸಿಮಯ್ಯ ಪತ್ತಿನ ಸಹಕಾರ ಸಂಘ ನಿ., ಮಲೆನಾಡು ದೇವಾಂಗ ಹಾಸ್ಟೆಲ್ ಆವರಣ, ಬನಶಂಕರಿ ರಸ್ತೆ, ಬಾಪೂಜಿ ನಗರ, ಶಿವಮೊಗ್ಗ-577201



**ಶ್ರೀ ಶಿವಕುಮಾರ ಬಸವರಾಜು ಬಾದವಾಡಗಿ**

**ನಿರ್ದೇಶಕರು**

ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು ಹಾಗೂ ನಿರ್ದೇಶಕರು, ಶ್ರೀ ಬಸವೇಶ್ವರ ಪತ್ತಿನ ಸಹಕಾರ ಸಂಘ ನಿ., ನಂ.303/ಕ ಪ್ಲಾಟ್ ನಂ.17,18 ಮತ್ತು 21, ಲಕ್ಷ್ಮೀನಗರ, ಸಂಗಮ ರೋಡ್ ಹುನಗುಂದ, ಬಾಗಲಕೋಟೆ ಜಿಲ್ಲೆ



**ಶ್ರೀ ಶಿವಾನಂದ ಬಸಪ್ಪ ನ್ಯಾಮಗೌಡ**

**ನಿರ್ದೇಶಕರು**

ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು ಹಾಗೂ ನಿರ್ದೇಶಕರು, ಶ್ರೀ ಮಳೇಸ್ವಾಮಿ ವಿವಿಧೋದ್ದೇಶಗಳ ಸಹಕಾರ ಸಂಘ ನಿ., ಬೆಳ್ಳುಬ್ಬಿ-586113 ವಿಜಾಪುರ ತಾಲ್ಲೂಕು, ವಿಜಾಪುರ ಜಿಲ್ಲೆ.



**ಶ್ರೀ ಹೆಚ್. ಅಶೋಕ್**

**ನಿರ್ದೇಶಕರು**

ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು ಹಾಗೂ ನಿರ್ದೇಶಕರು, ಶ್ರೀ ಗುರುರಾಘವೇಂದ್ರ ಪತ್ತಿನ ಸಹಕಾರ ಸಂಘ ನಿ., ಭುತೇಗೌಡ ಕಾಂಪ್ಲೆಕ್ಸ್, ಹಾಲಹಳ್ಳಿ ಮುಖ್ಯರಸ್ತೆ, ಮಂಡ್ಯ ಸಿಟಿ, ಮಂಡ್ಯ-571401



**ಶ್ರೀ ಚಂದ್ರಶೇಖರ್ ಕೋಲ್ಚಾರು**

**ನಿರ್ದೇಶಕರು**

ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು ಹಾಗೂ ನಿರ್ದೇಶಕರು, ಶ್ರೀವೆಂಕಟರಮಣ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ., ನಂಬರ್. 13756, ಸುಳ್ಯ-574239 ಸುಳ್ಯ ತಾಲ್ಲೂಕು, ದಕ್ಷಿಣಕನ್ನಡ ಜಿಲ್ಲೆ

## ಬೆಂಗಳೂರಿನ ಲೋಕಪಾವನಿ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿಗೆ ಆಯ್ಕೆ



**ವೈ. ಶ್ರೀನಿವಾಸಗೌಡ**

ಅಧ್ಯಕ್ಷರು

**ಲೋಕಪಾವನಿ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ., ಶ್ರೀನಗರ, ಬೆಂಗಳೂರು ಇದರ ಅಧ್ಯಕ್ಷರಾಗಿ ಶ್ರೀ ವೈ. ಶ್ರೀನಿವಾಸಗೌಡರವರು ಮತ್ತು ಉಪಾಧ್ಯಕ್ಷರಾಗಿ ಶ್ರೀ ಎಂ.ಟಿ. ಪ್ರಕಾಶ್‌ರವರು ಅವಿರೋಧವಾಗಿ ಆಯ್ಕೆಯಾಗಿರುತ್ತಾರೆ.**



**ಎಂ.ಟಿ. ಪ್ರಕಾಶ್**

ಉಪಾಧ್ಯಕ್ಷರು

# ಲೆಕ್ಕಪರಿಶೋಧನಾ ಪೂರ್ವ ತಯಾರಿ

## (ಮಾರ್ಚ್ ಮುಂಚೆ ಮತ್ತು ನಂತರದ ಸಂಘದವರ ಜವಾಬ್ದಾರಿಗಳು)

ಲೆಕ್ಕಪರಿಶೋಧನೆ ಪ್ರಾರಂಭವಾಗುವುದು ನಿರ್ದಿಷ್ಟ ಅವಧಿಯ ಲೆಕ್ಕಪತ್ರಗಳನ್ನು ಬರೆದು ಮುಗಿಸಿದ ನಂತರ. ಆಂಗ್ಲ ಭಾಷೆಯಲ್ಲಿ ಹೇಳುವುದಾದರೆ "Where Accounting ends, Auditing starts". ಲೆಕ್ಕಪರಿಶೋಧನೆಯು ಒಂದು ನಿರ್ದಿಷ್ಟ ಅವಧಿಯ ಆರ್ಥಿಕ ವಹಿವಾಟುಗಳ ಪರಿಶೀಲನೆಯಾಗಿರುತ್ತದೆ. ಆರ್ಥಿಕ ಪಾರದರ್ಶಕತೆ, ಕಾನೂನು, ನಿಯಮ ಹಾಗೂ ಉಪನಿಯಮಗಳ ಅನುಸರಣೆ, ಪಾಲನೆ ಮತ್ತು ಹೊಣೆಗಾರಿಕೆಯನ್ನು ಖಚಿತಪಡಿಸಲು ಅತ್ಯಗತ್ಯವಾಗಿರುತ್ತದೆ.

ಲೆಕ್ಕಪರಿಶೋಧನೆಯು ಮೋಸ,ವಂಚನೆ ಮತ್ತು ಹಣದುರುಪಯೋಗದ ಪ್ರಕರಣಗಳನ್ನು ಪತ್ತೆ ಹಚ್ಚಲು ಸಹಾಯ ಮಾಡುತ್ತದೆ. ಸಂಘದ ಸದಸ್ಯರ ಮತ್ತು ಇತರೆ ಪಾಲುದಾರರ (ಉದಾ: ಸಂಘಕ್ಕೆ ಸಾಲ ನೀಡಿದ ಬ್ಯಾಂಕುಗಳು, ಠೇವಣಿದಾರರು ಸಾಲ ಸಹಾಯಧನ ನೀಡಿದ ಸರ್ಕಾರ & ಸಂಸ್ಥೆಗಳು, ಸರಬರಾಜುದಾರರು ಹಾಗೂ ಇತರರು) ಹಿತಾಸಕ್ತಿಗಳ ಹಕ್ಕುಗಳನ್ನು ರಕ್ಷಿಸುತ್ತದೆ. ನಿಧಿಗಳ ಸೃಜನೆ, ಬಳಕೆ ಮತ್ತು ನಿಖರತೆಯನ್ನು, ಸಾಲ ವಿತರಣೆ, ವಸೂಲಾತಿ ಹಾಗೂ ಇತರೆ ಹಲವಾರು ಭಾಗಗಳಲ್ಲಿ ಪರಿಶೀಲಿಸುತ್ತದೆ. ಲೆಕ್ಕಪರಿಶೋಧನಾ ವರದಿಯು ಸದಸ್ಯರ ವಿಶ್ವಾಸವನ್ನು ಹೆಚ್ಚಿಸಿ, ಸಂಘದ ಆಡಳಿತದ ಕೈಗನ್ನಡಿಯಾಗುತ್ತದೆ.

ನಾವೀಗ 2024-25 ನೇ ಆರ್ಥಿಕ ವರ್ಷದ ಅಂತ್ಯದಲ್ಲಿದ್ದೇವೆ. ಸದರಿ ಲೇಖನವು ಸಹಕಾರ ಸಂಘಗಳ 2024-25ನೇ ಸಾಲಿನ ಲೆಕ್ಕಪರಿಶೋಧನೆಗೆ ಸಂಘದವರ (ಮು.ಕಾ.ನಿ. ಮತ್ತು ಆಡಳಿತ ಮಂಡಳಿಯ) ಜವಾಬ್ದಾರಿ / ಕರ್ತವ್ಯ / ಮುತುವರ್ಜಿಗಳ ಮೇಲೆ ಕೇಂದ್ರಿಕರಿಸಿ ಹಲವು ವಿಭಾಗಗಳಲ್ಲಿ ವಿಂಗಡಿಸಲಾಗಿದೆ.

### 1. ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಲೆಕ್ಕಪರಿಶೋಧಕರ ಆಯ್ಕೆ.

ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ, 1959ರ ಕಲಂ 63(1)ರ ಪ್ರಕಾರ ಪ್ರತಿ ಸಹಕಾರ ಸಂಘವು ಆರ್ಥಿಕ ವರ್ಷ ಮುಗಿದ ನಂತರ ಸೆಪ್ಟಂಬರ್ 01ರ ಒಳಗಾಗಿ ತನ್ನ ಲೆಕ್ಕಪತ್ರಗಳನ್ನು ಇಲಾಖಾ ಲೆಕ್ಕಪರಿಶೋಧಕರಿಂದ ಅಥವಾ ಸನ್ನದು ಲೆಕ್ಕಿಗರಿಂದ ಲೆಕ್ಕಪರಿಶೋಧನೆ ಮಾಡಿಸಿ ವರದಿಯನ್ನು ಪಡೆದು ಸೆಪ್ಟಂಬರ್ 25ರ ಒಳಗಾಗಿ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಲೆಕ್ಕಪರಿಶೋಧನಾ ವರದಿಯನ್ನು ಮಂಡಿಸಿ ಅನುಮೋದನೆ ಪಡೆಯತಕ್ಕದ್ದು.

**ಈ ಪ್ರಕ್ರಿಯೆಯಲ್ಲಿ ಗಮನಿಸಬೇಕಾದ ಅಂಶಗಳು:**

- ಹಿಂದಿನ ಸಾಲಿನ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಲೆಕ್ಕಪರಿಶೋಧಕರನ್ನು ಕಡ್ಡಾಯ ಠರಾವಿನ ಮೂಲಕ ಆಯ್ಕೆ ಮಾಡಿಕೊಂಡಿರುವುದನ್ನು ಖಚಿತಪಡಿಸಿಕೊಳ್ಳುವುದು.
- ಸದರಿ ಆಯ್ಕೆಯು ತಮ್ಮ ಸಂಘದ ದುಡಿಯುವ ಬಂಡವಾಳ/ ವಾರ್ಷಿಕ ವಹಿವಾಟಿನ ಆಧಾರದ ಮೇಲೆ ಎ / ಬಿ / ಸಿ ಶ್ರೇಣಿಯ ಅರ್ಹ ಲೆಕ್ಕಪರಿಶೋಧಕರನ್ನು ಆಯ್ಕೆ ಮಾಡಿಕೊಳ್ಳಲಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳುವುದು.
- ಸದರಿ ಆಯ್ಕೆಯನ್ನು ವಾರ್ಷಿಕ ಸಾಮಾನ್ಯ ಸಭೆ ಮುಗಿದ 07 ದಿನಗಳ ಒಳಗಾಗಿ ತಮ್ಮ ಸಂಘದ ಕಾರ್ಯವ್ಯಾಪ್ತಿಯ ಜಿಲ್ಲಾ ಜಂಟಿ ನಿರ್ದೇಶಕರು / ಉಪನಿರ್ದೇಶಕರು, ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆ ಇವರಿಗೆ ಆಯ್ಕೆ ಮಾಹಿತಿಯನ್ನು ಸಲ್ಲಿಸಲಾಗಿದೆಯೇ ಮತ್ತು ಆಯ್ಕೆಯಾದ ಲೆಕ್ಕಪರಿಶೋಧಕರಿಗೆ ಆಯ್ಕೆ ಪತ್ರ ತಲುಪಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳುವುದು.

### 2. ಲೆಕ್ಕಪರಿಶೋಧಕರಿಗೆ ಆರ್ಥಿಕ ತಖ್ತೆಃಗಳನ್ನು ಸಲ್ಲಿಸುವುದು.

ಕರ್ನಾಟಕ ಸಹಕಾರ ಸಂಘಗಳ ನಿಯಮ ಸಂಖ್ಯೆ 29 (3)ರ ಪ್ರಕಾರ ಸಂಘದವರು ಆರ್ಥಿಕ ವರ್ಷ ಮುಗಿದ 30 ದಿನಗಳ ಒಳಗಾಗಿ ಅಂದರೆ ಎಪ್ರಿಲ್ 30ರ ಒಳಗಾಗಿ ಆರ್ಥಿಕ ತಖ್ತೆಃ, ಕುಳುವಾರು ಪಟ್ಟಿ ಮತ್ತು ಇತರೆ ಸಂಬಂಧಪಟ್ಟ ಕಡ್ಡಾಯ ದಾಖಲೆಗಳನ್ನು ಆಡಳಿತ ಮಂಡಳಿ ಸಭೆಯಲ್ಲಿ ಮಂಡಿಸಿ, ಅನುಮೋದನೆ ಪಡೆದು, ಠರಾವು ಪಾಸು ಮಾಡಿ, ಆಡಳಿತಮಂಡಳಿಯವರು ಸಹಿ ಮಾಡಿದ ಆರ್ಥಿಕ ತಖ್ತೆಗಳನ್ನು (ಬಹುಮತದ ಅಥವಾ ಎಲ್ಲಾ ಆಡಳಿತ ಮಂಡಳಿ ಸದಸ್ಯರ ಸಹಿಯೊಂದಿಗೆ), ಮುಖ್ಯಕಾರ್ಯನಿರ್ವಾಹಕರ ಸಹಿ ಮತ್ತು ಮೊಹರಿನೊಂದಿಗೆ ಲೆಕ್ಕಪರಿಶೋಧನೆಗೆ ಹಾಜರುಪಡಿಸತಕ್ಕದ್ದು.

ಬಹಳಷ್ಟು ಜನರಿಗೆ ಆರ್ಥಿಕ ತಖ್ತೆಗಳನ್ನು ತಯಾರಿಸುವುದು ಲೆಕ್ಕಪರಿಶೋಧಕರ ಕಾರ್ಯ ಎಂದು ತಪ್ಪಾಗಿ ತಿಳಿದಿರುವ ಸಂದರ್ಭಗಳುಂಟು. ಆರ್ಥಿಕ ತಖ್ತೆಗಳನ್ನು ತಯಾರಿಸುವುದು ಮುಖ್ಯಕಾರ್ಯನಿರ್ವಾಹಕರ ಮತ್ತು ಸಂಬಂಧಪಟ್ಟ ಸಿಬ್ಬಂದಿಯ ಜವಾಬ್ದಾರಿಯಾಗಿರುತ್ತದೆ. ಆಡಳಿತ ಮಂಡಳಿಯವರು ಸದರಿ ಪ್ರಕ್ರಿಯೆಯನ್ನು ಜಾರಿಗೊಳಿಸಲು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 63(7)ರ ಅಡಿಯಲ್ಲಿ ಜವಾಬ್ದಾರರಾಗಿರುತ್ತಾರೆ. ಹಾಗೂ ಕಲಂ 29-ಸಿ(3)(ಸಿ) ಅಡಿಯಲ್ಲಿ ಆಡಳಿತ ಮಂಡಳಿಯು ಲೆಕ್ಕಪರಿಶೋಧಿತ ಆರ್ಥಿಕ ತಖ್ತೆಗಳನ್ನು ಮತ್ತು ಲೆಕ್ಕಪರಿಶೋಧನಾ ವರದಿಯನ್ನು ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಮಂಡಿಸದೇ ಇದ್ದ ಪಕ್ಷದಲ್ಲಿ ಎಲ್ಲಾ ಆಡಳಿತ ಮಂಡಳಿ ಸದಸ್ಯರು, ಆಡಳಿತ ಮಂಡಳಿ ಸದಸ್ಯರಾಗಿ ಮುಂದುವರೆಯಲು ಅನರ್ಹರಾಗುತ್ತಾರೆ. (ಅನರ್ಹತೆಯ ಆದೇಶದ ದಿನಾಂಕದಿಂದ ಮುಂದಿನ 5 ವರ್ಷಗಳವರೆಗೆ ಅನರ್ಹರಾಗುತ್ತಾರೆ).

### 3. ಆರಂಭಿಕ ಶಿಲ್ಕುಗಳು

ಹಿಂದಿನ ವರ್ಷದ ಅಂತ್ಯಕ್ಕೆ (31-03-2024 ಕ್ಕೆ) ಲೆಕ್ಕಪರಿಶೋಧಿತ ಅಥಾವೆ ಪತ್ರಿಕೆಯಲ್ಲಿನ ಅಂತಿಮ ಶಿಲ್ಕುಗಳು ವರದಿ ವರ್ಷದ ಆರಂಭಕ್ಕೆ (01-04-2024 ಕ್ಕೆ) ಸರಿಯಾಗಿ ಮುಂದುವರೆದಿರುವುದನ್ನು ಧೃಡೀಕರಿಸಿಕೊಳ್ಳಬೇಕು. ವಿಶೇಷವಾಗಿ ಗಣಕೀಕೃತ ಲೆಕ್ಕಪತ್ರಗಳಲ್ಲಿ ಹಿಂದಿನ ವರ್ಷದ ಲೆಕ್ಕಪರಿಶೋಧಿತ ಆರ್ಥಿಕ ತಖ್ತೆಗಳನ್ನು ತಂತ್ರಾಂಶ

ನಿರ್ವಹಿಸುವ ಸಂಸ್ಥೆ/ ಕಂಪನಿಯವರಿಗೆ ಸಲ್ಲಿಸಿ ವರದಿ ಸಾಲಿನ ಆರಂಭಿಕ ಶಿಲ್ಕುಗಳನ್ನು ಲೆಕ್ಕ–ಪತ್ರ ತಂತ್ರಾಂಶದಲ್ಲಿ ಅಳವಡಿಸಿಕೊಳ್ಳುವುದು ಕಡ್ಡಾಯವಾಗಿರುತ್ತದೆ.

### 4. ಕುಳುವಾರು ಪಟ್ಟಿಗಳ ತಾಳೆ ನೋಡಿಕೊಳ್ಳುವಿಕೆ

ಷೇರು ಬಂಡವಾಳ, ಠೇವಣಿಗಳು (ಜವಾಬ್ದಾರಿಗಳು) ಮತ್ತು ವಿವಿಧ ರೀತಿಯ ಬರತಕ್ಕ ಸಾಲಗಳ (ಆಸ್ತಿಗಳು) ಕುಳುವಾರು ಪಟ್ಟಿಯ ಒಟ್ಟು ಮೊತ್ತ ಅಢಾವೆ ಪತ್ರಿಕೆಯ ಸಂಭಂದಪಟ್ಟ ಶೀರ್ಷಿಕೆಗೆ ತಾಳೆಯಾಗಿರುವುದನ್ನು ಧೃಡೀಕರಿಸಿಕೊಳ್ಳಬೇಕು. ವ್ಯತ್ಯಾಸವಿದ್ದಲ್ಲಿ ಸದರಿ ವ್ಯತ್ಯಾಸವು ವರದಿ ಸಾಲಿನದೋ ಅಥವಾ ಹಿಂದಿನ ಸಾಲಿನದೋ ಎಂದು ಖಾತರಿಪಡಿಸಿಕೊಂಡು ಸೂಕ್ತ ಕಾರಣ ಮತ್ತು ದಾಖಲೆಗಳೊಂದಿಗೆ ಸರಿಪಡಿಸಿಕೊಳ್ಳತಕ್ಕದ್ದು. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಸಾಲಮನ್ನಾ ಮತ್ತು ಬಡ್ಡಿಮನ್ನಾ ಮೊತ್ತಗಳಿಗೆ ಸೂಕ್ತ ಕುಳುವಾರು ಪಟ್ಟಿಗಳನ್ನು ತಯಾರಿಸಿ ಸರ್ಕಾರದಿಂದ ಬರತಕ್ಕ ಮೊತ್ತಗಳಿಗೆ ತಾಳೆ ಮಾಡಿಕೊಳ್ಳುವುದು. ಗಣಕಯಂತ್ರ ತಂತ್ರಾಂಶದಲ್ಲಿ ಸದರಿ ವ್ಯತ್ಯಾಸಗಳನ್ನು ಆರ್ಥಿಕ ವರ್ಷ ಮುಗಿಯುವ ಮುಂಚೆಯೇ ಸರಿಪಡಿಸಿಕೊಳ್ಳುವುದು ಒಳಿತು. ಕೆಲವು ತಂತ್ರಾಂಶಗಳಲ್ಲಿ ಡೇ–ಎಂಡ್ ಆದ ನಂತರ ಕುಳುವಾರು ವ್ಯತ್ಯಾಸಗಳನ್ನು ಹಿಂದಿನ ದಿನಾಂಕಕ್ಕೆ ಹೋಗಿ ಸರಿಪಡಿಸಲು ಅವಕಾಶ ಕಲ್ಪಿಸಿರುವುದಿಲ್ಲ.

### 5. ಧೃಡೀಕರಣಗಳು

ಆರ್ಥಿಕ ವರ್ಷ ಮುಗಿದ ತಕ್ಷಣ ಈ ಕೆಳಕಂಡ ಧೃಡೀಕರಣ ಪತ್ರಗಳನ್ನು (ಸಹಿ ಮತ್ತು ಮೊಹರಿನೊಂದಿಗೆ) ಸಂಬಂಧಪಟ್ಟವರಿಂದ ಪಡೆಯತಕ್ಕದ್ದು.

- ಅಢಾವೆ ಪತ್ರಿಕೆಯ ಜವಾಬ್ದಾರಿ ಭಾಗದ ಈ ಕೆಳಕಂಡ ಶೀರ್ಷಿಕೆಯ ಧೃಡಿಕರಣಗಳು
- ಬ್ಯಾಂಕಿನಿಂದ ಪಡೆದ ವಿವಿಧ ರೀತಿಯ ಸಾಲಗಳ ಅಂತಿಮ ಶಿಲ್ಕು (Along with DCB Report for PACS)
- ಸರಬರಾಜುದಾರರಿಗೆ ಪಾವತಿಸಬೇಕಾದ ಅಂತಿಮ ಶಿಲ್ಕು ಮತ್ತು ವರ್ಷದ ವ್ಯವಹಾರಗಳ ಲೆಡ್ಜರ್ ಖಾತೆ.
- ಅಢಾವೆ ಪತ್ರಿಕೆಯ ಆಸ್ತಿ ಭಾಗದ ಈ ಕೆಳಕಂಡ ಶೀರ್ಷಿಕೆಯ ಧೃಡಿಕರಣಗಳು
- ಎಲ್ಲಾ ಬ್ಯಾಂಕ್ ಖಾತೆಗಳ ಅಂತಿಮ ಶಿಲ್ಕುಗಳು ಮತ್ತು ಸಂಪೂರ್ಣ ವರ್ಷದ ಬ್ಯಾಂಕ್ ಸ್ಟೇಟ್‌ಮೆಂಟ್
- **ಹೂಡಿಕೆಗಳು:** ಷೇರುಗಳಲ್ಲಿ, ಠೇವಣಿಗಳಲ್ಲಿ, ಮೀಸಲು ನಿಧಿ, ಕಟ್ಟಡ ನಿಧಿ ಹೀಗೆ ವಿವಿಧ ರೀತಿಯ ಹೂಡಿಕೆಗಳಲ್ಲಿ ಇರುವ ಮೊತ್ತಗಳಿಗೆ ಸಂಬಂಧಪಟ್ಟ ಸಂಸ್ಥೆಯಿಂದ ಧೃಡೀಕರಣ ಪಡೆಯತಕ್ಕದ್ದು.
- ಲಾಭ–ಹಾನಿ ಖಾತೆಯ ಆದಾಯ ಭಾಗದಲ್ಲಿ
- ಬ್ಯಾಂಕಿನಿಂದ ಬಂದ ಬಡ್ಡಿಗೆ ಸಂಬಂಧಿಸಿದಂತೆ Interest Certificate & TDS Certificate ಸಂಬಂಧಪಟ್ಟ ಬ್ಯಾಂಕಿನಿಂದ ಪಡೆಯತಕ್ಕದ್ದು
- ಆದಾಯ ತೆರಿಗೆ ಸಲ್ಲಿಸುವ ಲೆಕ್ಕಪರಿಶೋಧಕರಿಂದ 26 AS / AIS
- ಸರ್ಕಾರದಿಂದ ಬರತಕ್ಕ ಕೆಸಿಸಿ ಸಾಲದ ಬಡ್ಡಿ ಮತ್ತು ಬಡ್ಡಿಮನ್ನಾ ಬಾಬತ್ತಿಗೆ ಡಿಸಿಸಿ ಬ್ಯಾಂಕಿನಿಂದ ಧೃಡೀಕರಣ ಪಡೆಯುವುದು (Only for PACS)
- ಬ್ಯಾಂಕಿನಿಂದ ಪಡೆದ ಆದಾಯದ ಧೃಡೀಕರಣಗಳಿಗೆ, ಆದಾಯ ತೆರಿಗೆ ಇಲಾಖೆಯ 26AS / AIS ದಾಖಲೆಗಳ ಮೊತ್ತಗಳು ಸಂಘದ ಲೆಕ್ಕಪತ್ರಗಳಿಗೆ ತಾಳೆಯಾಗಿರಬೇಕು.
- ಕೆಲವು ಸಹಕಾರ ಸಂಘಗಳು ಇತರೆ ಸಂಸ್ಥೆಗಳಲ್ಲಿ ವ್ಯವಹಾರ ಠೇವಣೆ ಇರಿಸಿರುತ್ತಾರೆ. (ಉದಾ: ರಸಗೊಬ್ಬರ ಖರೀದಿ ಕಂಪನಿಗಳಲ್ಲಿ). ಸದರಿ ಕಂಪನಿಗಳು/ಸಂಸ್ಥೆಗಳು ವ್ಯವಹಾರ ಠೇವಣೆಗಳ ಮೇಲೆ ಬಡ್ಡಿಯನ್ನು ಕೊಟ್ಟು ಸದರಿ ಬಡ್ಡಿಯನ್ನು ಸಂಘದ ಠೇವಣಿಗೆ ಜಮೆ ಮಾಡಿರುತ್ತಾರೆ ಹಾಗೂ ಸದರಿ ಬಡ್ಡಿಯ ಮೇಲೆ ಆದಾಯ ತೆರಿಗೆ ಟಿ.ಡಿ.ಎಸ್. ಕಟಾವು ಮಾಡಿರುತ್ತಾರೆ. ಸದರಿ ಬಡ್ಡಿ ಮತ್ತು ಟಿ.ಡಿ.ಎಸ್. ಮೊತ್ತಕ್ಕೆ ಸಂಭಂದಪಟ್ಟ ಸಂಸ್ಥೆಗಳಿಂದ ದಾಖಲೆ ಪಡೆದು ಸಂಘದ ಲೆಕ್ಕ ಪುಸ್ತಕಗಳಲ್ಲಿ ಹೊಂದಾಣಿಕೆ ಮಾಡಿಕೊಳ್ಳತಕ್ಕದ್ದು.
- ಲಾಭ–ಹಾನಿ ಖಾತೆಯ ವೆಚ್ಚ/ಹಾನಿ ಭಾಗದಲ್ಲಿ
- ಪಡೆದ ಸಾಲಗಳಿಗೆ ಪಾವತಿಸಿದ ಮತ್ತು ಪಾವತಿಸಬೇಕಾದ ಬಡ್ಡಿಯ ಬಾಬತ್ತುಗಳಿಗೆ ಬ್ಯಾಂಕಿನಿಂದ ಧೃಡೀಕರಣ ಪತ್ರ ಪಡೆಯುವುದು

### 6. ಅವಕಾಶಗಳು

ನಿಯಮ 22 ರಂತೆ ಈ ಕೆಳಕಂಡ ಅವಕಾಶಗಳನ್ನು ಸಾಲಾಖೈರಿಗೆ ಕಲ್ಪಿಸುವುದು

- ಸವಕಳಿ (ಈ ವರೆಗೆ ತೆಗೆದ ಸವಕಳಿ ಅವಕಾಶವು ಆಸ್ತಿ ಮೊತ್ತಕ್ಕೆ ಸಮವಾಗಿದ್ದರೆ ಮುಂದಿನ ಸವಕಳಿ ತೆಗೆಯುವ ಅವಶ್ಯಕತೆ ಇರುವುದಿಲ್ಲ)
- ಲೆಕ್ಕಪರಿಶೋಧನಾ ಶುಲ್ಕ
- ಪಾವತಿಸಬೇಕಾದ ಬಡ್ಡಿ (ತಂದ ಸಾಲಗಳ ಮೇಲೆ ಮತ್ತು ಸದಸ್ಯರ ಠೇವಣೆಗಳ ಮೇಲೆ)
- ಅನುತ್ಪಾದಕ ಸಾಲಗಳ ಮೇಲಿನ ಅವಕಾಶ / ಅನುತ್ಪಾದಕ ಹೂಡಿಕೆ ಮೇಲಿನ ಅವಕಾಶ
- ಇತರೆ ಬರತಕ್ಕವುಗಳ ಮೇಲೆ ಅವಕಾಶ
- ಸಾಲಾಖೈರಿಗೆ ಪಾವತಿಗೆ ಬಾಕಿ ಉಳಿದಿರುವ ವೆಚ್ಚಗಳು ( ಉದಾ: ವೇತನ, ಬಾಡಿಗೆ, ತೆರಿಗೆ, ವಿದ್ಯುಚ್ಛಕ್ತಿ ಮತ್ತು ಇತರೆ ವೆಚ್ಚಗಳು)
- ಸಿಬ್ಬಂದಿ ಉಪದಾನ ಮತ್ತು ಗಳಿಕೆ ರಜಾ

### 7. ಲಾಭ ವಿಂಗಡಣೆ

ಸಂಘದ ಉಪನಿಯಮಗಳ ಪ್ರಕಾರ ಹಿಂದಿನ ಸಾಲಿನ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಲಾಭವಿಂಗಡಣೆ ಮಾಡಿದ ಮೊತ್ತಗಳನ್ನು ಲೆಕ್ಕಪತ್ರಗಳಲ್ಲಿ ಅಳವಡಿಸಿಕೊಂಡಿರುವ ಬಗ್ಗೆ ಧೃಡೀಕರಿಸಿಕೊಳ್ಳುವುದು.

ವಿ.ಸೂ. ವಾರ್ಷಿಕ ಸಾಮಾನ್ಯ ಸಭೆಯ ಠರಾವಿನಲ್ಲಿ ವಿಂಗಡಿಸಿದ ಮೊತ್ತಗಳು ಮತ್ತು ಸಂಘದ ಲೆಕ್ಕಪುಸ್ತಕಗಳಲ್ಲಿನ ಮೊತ್ತಗಳಿಗೆ ವ್ಯತ್ಯಾಸವಿರಬಾರದು. ಸದರಿ ಲಾಭ ವಿಂಗಡಣೆಯು ಸಹಕಾರ ಸಂಘಗಳ ಕಾಯ್ದೆ, ನಿಯಮಗಳು ಮತ್ತು ಉಪನಿಯಮಗಳಿಗೆ ವ್ಯತಿರಿಕ್ತವಾಗಿರಬಾರದು.

(ಮುಂದಿನ ಸಂಚಿಕೆಗೆ...)

# ಯುಗಾದಿಯ ಹೊಸ ವರುಷಕ್ಕೆ ಊರೆಲ್ಲಾ ಹರುಷ

ಪ್ರಕೃತಿಮಾತೆಯನ್ನು ಪೂಜಿಸುವ ಹಬ್ಬವೇ ಯುಗಾದಿ. ನಮ್ಮ ಹಿರಿಯರು ಸಾವಿರಾರು ವರ್ಷಗಳಿಂದ ಪ್ರಕೃತಿಮಾತೆಯನ್ನು ಪೂಜಿಸಿಕೊಂಡು ಬಂದಿದ್ದಾರೆ.

ಯುಗಾದಿಯನ್ನು ಮಹಾರಾಷ್ಟ್ರದಲ್ಲಿ ಗುಡಿ ಪಾಡ್ವಾ ಎಂದೂ ಆಚರಿಸುವ ಸಾಂಪ್ರದಾಯಿಕ ಹಬ್ಬವಾಗಿದೆ. ಇದು ಕರ್ನಾಟಕ, ತೆಲಂಗಾಣ, ಆಂಧ್ರಪ್ರದೇಶ ಮತ್ತು ಮಹಾರಾಷ್ಟ್ರದ ಜನರು ಆಚರಿಸುವ ಮಹತ್ವದ ಹಬ್ಬವಾಗಿದೆ. ಈ ಪ್ರದೇಶಗಳಲ್ಲಿ ಅನುಸರಿಸುವ ಚಂದ್ರಮಾನ ಕ್ಯಾಲೆಂಡರ್ ಪ್ರಕಾರ ಇದು ಹೊಸ ವರ್ಷದ ಆರಂಭವನ್ನು ಸೂಚಿಸುತ್ತದೆ. ಯುಗಾದಿಯು ಸಂತೋಷ, ಭರವಸೆ ಮತ್ತು ಹೊಸ ಆರಂಭದ ಹಬ್ಬವಾಗಿದ್ದು, ವಿವಿಧ ಆಚರಣೆಗಳು ಮತ್ತು ಸಂಪ್ರದಾಯಗಳೊಂದಿಗೆ ಆಚರಿಸಲಾಗುತ್ತದೆ. ಯುಗಾದಿ ಹಬ್ಬವನ್ನು ಆಚರಿಸುವ ಮುನ್ನ ಅದರ ಇತಿಹಾಸವನ್ನು ತಿಳಿದುಕೊಳ್ಳುವುದು ಮುಖ್ಯ.

ವಸಂತಋತು ಎಂದರೆ ಪ್ರಕೃತಿಯು ಹಸಿರಿನಿಂದ ಸಜ್ಜಾಗುವ ಸುಂದರ ಸಮಯ. ಈ ಋತುವಿನ ಚೈತ್ರಮಾಸದ ಮೊದಲ ದಿನವೇ ಯುಗಾದಿ. ಚಿಗುರೊಂದು ಮುಂದೆ ಹಣ್ಣಾಗಿ ಪೂರ್ಣತೆಯನ್ನು ಪಡೆಯಲು ಸಾಧ್ಯವಾಗಿಸುವಂಥ ಆರಂಭದ ಕ್ಷಣವಿದು. ಉದುರುವಿಕೆ; ಅರಳುವಿಕೆ; ಅಗಲುವಿಕೆ; ಚಿಗುರುವಿಕೆ – ಇವು ಸಮಗ್ರವೂ ಪರಿಪೂರ್ಣವೂ ಆದ ಕಾರ್ಯಚಕ್ರದ ಬೇರೆ ಬೇರೆ ಗತಿಗಳಷ್ಟೆ. ಇಂಥ ಸಂದೇಶವನ್ನು ನಮಗೆ ಪ್ರಕೃತಿ ನೀಡುತ್ತಿದೆ. ಸುಖ–ದುಃಖಗಳನ್ನು ಹೀಗೆ ನಾವು ಸ್ವೀಕರಿಸಿದ್ದೇವೆ ಎಂಬುದರ ಸಾಂಕೇತಿಕತೆಯನ್ನು ಬೇವು–ಬೆಲ್ಲಗಳ ಮಿಶ್ರಣವನ್ನು ತಿನ್ನುವುದರಲ್ಲಿ ಕಾಣಬಹುದಾಗಿದೆ. ಯುಗದ ಆದಿಯಲ್ಲಿಯೇ ಬದುಕನ್ನು ಧೈರ್ಯವಾಗಿಯೂ ಸಂತಸವಾಗಿಯೂ ಸ್ವೀಕರಿಸುವಂಥ ವಿವೇಕವೇ ಯುಗಾದಿ ಹಬ್ಬದ ಮೂಲತತ್ವ.

ಮಾನವ ಕುಲಕೋಟಿ ಹಾಗೂ ಸಕಲ ಚರಾ ಚರಾ ಜೀವ ಜಂತುಗಳ ಬೆಳವಣಿಗೆಗೆ ಸಕಲ ಸೌಲಭ್ಯಗಳನ್ನು ಕಲ್ಪಿಸಿದ ಪ್ರಕೃತಿ ಮಾತೆಯನ್ನು ಸ್ಮರಿಸಿ ಪೂಜಿಸುವುದೆ ಯುಗಾದಿ ಹಬ್ಬದ ವಿಶೇಷ.

ಪ್ರಕೃತಿ ಮಾತೆ ನಮಗೆ ಗಾಳಿ, ಬೆಳಕು, ನೀರು, ಭೂಮಿ, ಆಹಾರ ಸಹಿತ ಸರ್ವಸ್ವವನ್ನೂ ನೀಡಿದೆ. ಆ ಮಾತೆಯನ್ನು ನಾವು ಎಷ್ಟು ಸ್ಮರಿಸಿದರು ಕಮ್ಮಿಯೇ. ನಮ್ಮನ್ನು ಜತನದಿಂದ ಕಾಪಾಡುವ ಪ್ರಕೃತಿಮಾತೆಯನ್ನು ಮುಂದಿನ ಪೀಳಿಗೆಗಾದರೂ ಕಾಪಾಡುವುದು ನಮ್ಮ ಆದ್ಯ ಕರ್ತವ್ಯ. ಈ ಸಂದೇಶವನ್ನು ಸಾರುವುದೇ ಯುಗಾದಿ ಹಬ್ಬದ ವಿಶೇಷಗಳಲ್ಲಿ ಒಂದಾಗಿದೆ. ಇಂದಿನ ಆಧುನಿಕ ಯುಗದಲ್ಲಿ ಗಾಳಿ, ನೀರು, ಪರಿಸರ ಹೆಚ್ಚು ಹೆಚ್ಚು ಪ್ರಮಾಣದಲ್ಲಿ ಮಾಲಿನ್ಯ ಹೊಂದುತ್ತಿದ್ದು, ಅಭಿವೃದ್ಧಿಯ ಹೆಸರಿನಲ್ಲಿ ಕಾಡುಗಳನ್ನು ಎಗ್ಗಿಲ್ಲದೆ ನಾಶ ಮಾಡಲಾಗುತ್ತದೆ ಭವಿಷ್ಯದಲ್ಲಿ



ಇದರ ದುಷ್ಪರಿಣಾಮ ಮಾನವ ಜನಾಂಗವೇ ಎದುರಿಸಬೇಕಾಗುತ್ತದೆ. ಆ ಹಿನ್ನಲೆಯಲ್ಲಿ ಪ್ರಕೃತಿ ಮಾತೆಯನ್ನು ಪೂಜಿಸುವ ಯುಗಾದಿ ಹಬ್ಬದಂದು ಪರಿಸರ ರಕ್ಷಣೆಯ ಸಂದೇಶಗಳನ್ನು ಸಾರುವ ಕೆಲಸ ಪ್ರತಿ ಮನೆಯಿಂದ ನಡೆದರೆ ಈ ಹಬ್ಬ ಇನ್ನಷ್ಟು ಅರ್ಥಪೂರ್ಣವಾಗುತ್ತದೆ.

ಹಬ್ಬದ ಸಿದ್ಧತೆಗಳು ಒಂದು ವಾರದ ಮೊದಲೇ ಪ್ರಾರಂಭವಾಗುತ್ತವೆ. ಮನೆಯ ಸಂಪೂರ್ಣವಾಗಿ ಶುಚಿಗೊಳಿಸಲಾಗುತ್ತದೆ. ಕುಟುಂಬದ ಪ್ರತಿಯೊಬ್ಬರಿಗೂ ಹೊಸ ಬಟ್ಟೆಗಳನ್ನು ಖರೀದಿಸಲಾಗುತ್ತದೆ. ಹಬ್ಬದ ದಿನದಂದು ಮನೆಯ ಹೆಂಗಸರು ಮನೆಯ ಬಾಗಿಲಲ್ಲಿ ವರ್ಣಮಯ 'ರಂಗೋಲಿ' ಹಾಕುತ್ತಾರೆ. ಹೊಸ ವರ್ಷವನ್ನು ಸ್ವಾಗತಿಸಲು ತಾಜಾ ಮಾವಿನ ಹಾಗೂ ಬೇವಿನ ಎಲೆಗಳಿಂದ ಮಾಡಿದ ತೋರಣ ಬಾಗಿಲಿಗೆ ಕಟ್ಟಲಾಗುತ್ತದೆ.

**ಯುಗಾದಿಯಂದು ಎಣ್ಣೆ ಸ್ನಾನ :** ಯುಗಾದಿ ಹಬ್ಬದಲ್ಲಿ ಎಣ್ಣೆ ಸ್ನಾನ ಮತ್ತೊಂದು ವಿಶೇಷ, ಮನೆ ಮಂದಿಯೆಲ್ಲ ಸ್ನಾನ ಮಾಡಿದ ನಂತರ ಮತ್ತು ಏನನ್ನಾದರೂ ತಿನ್ನುವ ಮೊದಲು, ಕರಗಿದ ತುಪ್ಪ ತುಂಬಿದ ಬಟ್ಟಲಿನಲ್ಲಿ ಒಬ್ಬರು ಮತ್ತೊಬ್ಬರ ಪ್ರತಿಬಿಂಬವನ್ನು ನೋಡುವುದು ಶುಭವೆಂದು ಪರಿಗಣಿಸಲಾಗುತ್ತದೆ. ಮನೆಯ ಹಿರಿಯ ಮಹಿಳೆಯರು, ನಂತರ ಕುಟುಂಬದ ಎಲ್ಲ ಸದಸ್ಯರ ಹಣೆಯ ಮೇಲೆ 'ಕುಂಕುಮ' ಹಚ್ಚಿ, ಭಗವಂತನ ವಿಗ್ರಹಕ್ಕೆ ತಾಜಾ ಬಟ್ಟೆ ಮತ್ತು ಬಿಳಿ ಮಲ್ಲಿಗೆ ಹೂಗಳಿಂದ ಮಾಡಿದ ಹಾರವನ್ನು ಅಲಂಕರಿಸಿ, ಇಡೀ ಕುಟುಂಬವು ಒಟ್ಟಾಗಿ ಪ್ರಾರ್ಥನೆ ಸಲ್ಲಿಸುತ್ತಾರೆ.

**ಪಂಚಾಂಗ ಶ್ರವಣ :** ಪ್ರಾರ್ಥನೆ ಮುಗಿದ ನಂತರ ಪಂಚಾಂಗ ಪೂಜೆ ಓದುವುದು ವಾಡಿಕೆ. ಪಂಚಾಂಗ ಪೂಜೆಯ ನಂತರ ಮನೆಯ ಹಿರಿಯರು ಮನೆಯ ಪ್ರತಿಯೊಬ್ಬರೂ ಕೇಳುವಂತೆ ಪಂಚಾಂಗ ಓದುತ್ತಾರೆ. ಈ

ಶುಭ ದಿನದಂದು ವಿಶೇಷ ಸಾಂಪ್ರದಾಯಿಕ ಭಕ್ಷ್ಯಗಳನ್ನು ಭಗವಂತನಿಗೆ ನೈವೇದ್ಯಕ್ಕಾಗಿ ತಯಾರಿಸಲಾಗುತ್ತದೆ. ಪುಳಿಯೋಗರೆ, ಒಬ್ಬಟ್ಟು, ಸಿಹಿ ಪೊಂಗಲ್, ಮಾವು ಪಚಡಿ, ಹೆಸರುಕಾಳು ಪಾಯಸ ಕೋಸಂಬರಿ, ವಡಾ ಇತ್ಯಾದಿ ತಿಂಡಿಗಳ ನಿಜ ಮಾಡಲಾಗುತ್ತದೆ. ಹೀಗೆ ಹಬ್ಬಕ್ಕೆಂದು ಮಾಡಿದ ಅಡುಗೆಯನ್ನು ಮೊದಲು ಭಗವಂತನಿಗೆ ನೈವೇದ್ಯ ಮಾಡಿ, ನಂತರ ಎಲ್ಲರಿಗೂ 'ಪ್ರಸಾದ' ವಿತರಿಸಲಾಗುತ್ತದೆ. ಹಬ್ಬದ ದಿನ ಸಂಜೆ ಭಗವಂತನ ಆಶೀರ್ವಾದ ಪಡೆಯಲು ಭಕ್ತರು ದೇವಾಲಯಕ್ಕೆ ಭೇಟಿ ನೀಡುತ್ತಾರೆ. ದೇವಾಲಯದಲ್ಲಿ ಅರ್ಚಕರು ಎಲ್ಲರಿಗೂ ಹೊಸ ವರ್ಷದ ಪಂಚಾಂಗವನ್ನು ಓದಿ ಹೇಳುತ್ತಾರೆ. ಈ ಸಂಪ್ರದಾಯವನ್ನು 'ಪಂಚಾಗ ಶ್ರವಣ' ಎಂದು ಕರೆಯಲಾಗುತ್ತದೆ.

**ಸಿಹಿ ಕಹಿಗಳ ಸಂಮ್ಮಿಶ್ರಣ :** ಯುಗಾದಿ ಹಬ್ಬದಂದು ಇನ್ನೊಂದು ವಿಶೇಷ ಆಚರಣೆ ಎಂದರೆ ಬೇವು – ಬೆಲ್ಲ ಹಂಚುವುದು, ಇದು ಜೀವನದ ಏಳು ಬೀಳುಗಳನ್ನ ಸೂಚಿಸುತ್ತದೆ. ಇದರಲ್ಲಿನ ಬೆಲ್ಲ ಬಾಳಿನ ಸಂತೋಷದ ಕ್ಷಣಗಳ ಸಂಕೇತವಾದರೆ, ಹುಳಿ ಬದುಕಿನ ಸವಾಲುಗಳನ್ನ, ಮಾವು ಆಶ್ಚರ್ಯದ ಕ್ಷಣಗಳನ್ನ, ಬೇವು ಕಹಿ ಕ್ಷಣಗಳ ಸಂಕೇತವಾಗಿದೆ. ವಿಶೇಷವಾದ ಬೇವು –ಬೆಲ್ಲ ಮಿಶ್ರಣವನ್ನು ಮೊದಲು ಭಗವಂತನಿಗೆ ಅರ್ಪಿಸಿ, ನಂತರ ಕುಟುಂಬದ ಸದಸ್ಯರಿಗೆ ಮತ್ತು ಮನೆಗೆ ಬರುವ ಅತಿಥಿಗಳಿಗೂ ನೀಡಲಾಗುತ್ತದೆ.

ಕರಾವಳಿಯ ಸೌರಮಾನ ಯುಗಾದಿಯ ವಿಶೇಷತೆ ಖಣಿ ಇಡುವುದು. ಬಾಳೆ ಎಲೆ, ತಟ್ಟೆಯಲಿ ಅಕ್ಕಿ ಹಾಕಿ ಅದರ ಮೇಲೆ ತೆಂಗಿನಕಾಯಿ, ಸೌತೇಕಾಯಿ, ರವಿಕೆ ಕಣ, ಹೊಸ ಬಟ್ಟೆ, ಚಿನ್ನ, ಬತ್ತದ ತೆನೆ, ಹಣ್ಣು, ದೇವರ ಪ್ರತಿಮೆ ಅದರ ಮುಂದೆ ಒಂದು ಕನ್ನಡಿ ಇತ್ತು, ಆ ಕನ್ನಡಿಯಲಿ ದೇವರ ಪ್ರತಿಮೆ ಹಾಗೂ ತಟ್ಟೆಯಲಿ ಇಟ್ಟಂತಹ ವಸ್ತುಗಳನ್ನು ಕಾಣುವ ಹಾಗೆ ಇಡುತ್ತಾರೆ. ಯುಗಾದಿ ಹಬ್ಬದಂದು ಬೆಳಿಗ್ಗೆ ಬೇಗ ಎದ್ದು ದೇವರ ದೀಪ ಹಚ್ಚಿ ಖಣಿಯಲ್ಲಿನ ಕನ್ನಡಿಯಲಿ ದೇವ ದರ್ಶನ ಪಡೆಯುವುದು ಅಂದಿನ ವಿಶೇಷ. ನಂತರ ಸ್ನಾನ, ಹೋಳಿಗೆ ಚಿತ್ರಾನ್ನದೂಟ.

ಯುಗಾದಿ ಹಬ್ಬ ಆಚರಣೆ ಪ್ರಯುಕ್ತ ಯುವಕರು, ಹಿರಿಯರು, ಮಹಿಳೆಯರಿಗೆ ಹಾಗೂ ಮಕ್ಕಳ ಮನರಂಜನೆಗಾಗಿ ಆಯಾ ಊರುಗಳ ಸಂಪ್ರದಾಯದಂತೆ ವಿಶೇಷ ಕ್ರೀಡಾಕೂಟ ನಡೆಸಿ ಗೆದ್ದವರಿಗೆ ಬಹುಮಾನ ವಿತರಿಸಲಾಗುತ್ತದೆ.

ಕುಟುಂಬದಲ್ಲಿ ಪ್ರೀತಿ ಸೌಹಾರ್ಧತೆ ಸಂಬಂಧಗಳನ್ನು ಬೆಸೆಯುವುದು ಹಿರಿಯರಿಗೆ ಗೌರವ ಸಲ್ಲಿಸುವುದು ಮಕ್ಕಳಿಗೆ ಕುಟುಂಬ ಮತ್ತು ಸಾಮಾಜಿಕ ಸಂಬಂಧಗಳ ಮಹತ್ವದ ಅರಿವು ಮೂಡಿಸುವುದು ಹಾಗೂ ನೆರೆಹೊರೆಯವರನ್ನು ಪ್ರೀತಿಸುವ ಜೊತೆಗೆ ವಸುದೈವ ಕುಟುಂಬದ ಸಂದೇಶಸಾರುವುದೆ ಮಹತ್ವವುಳ್ಳ ಹಬ್ಬದ ಮಹತ್ವವಾಗಿದೆ.

**ಪ್ರಾಚೀನ ಹಿನ್ನೆಲೆ :** ಯುಗಾದಿ ನಿನ್ನೆ, ಮೊನ್ನೆಯಿಂದ ಆಚರಿಸಿಕೊಂಡು ಬಂದ ಹಬ್ಬವಲ್ಲ. ಬದಲಾಗಿ ಶತ ಶತಮಾನಗಳಿಂದಲೂ ಆಚರಿಸಿಕೊಂಡು



ಬಂದ ಹಬ್ಬವಾಗಿದೆ. ಅದರ ಮೂಲವು ಶಾತವಾಹನ ರಾಜವಂಶಕ್ಕೂ ಹಿಂದಿನದು ಎನ್ನುವ ನಂಬಿಕೆಯಿದೆ. ಈ ರಾಜ ವಂಶವು ಇಂದಿನ ಆಂಧ್ರ ಪ್ರದೇಶ, ತೆಲಂಗಾಣ ಮತ್ತು ಮಹಾರಾಷ್ಟ್ರದ ಭಾಗಗಳನ್ನು ಕ್ರಿ.ಪೂ ಸುಮಾರು 230 ರಿಂದ ಕ್ರಿ.ಶ 220 ರವರೆಗೆ ಆಳಿದ ಸಾಮ್ರಾಜ್ಯವಾಗಿದೆ. ಈ ಕಾಲದ ಪ್ರಾಚೀನ ಗ್ರಂಥಗಳು ಮತ್ತು ಶಾಸನಗಳಲ್ಲಿ ಹಬ್ಬದ ಉಲ್ಲೇಖವನ್ನು ಕಾಣಬಹುದು.

**ಸಾಂಸ್ಕೃತಿಕ ಮಹತ್ವ :** ಯುಗಾದಿಯು ಕೇವಲ ಹಬ್ಬದ ದಿನವಲ್ಲ. ಬದಲಾಗಿ, ಇದೊಂದು ಸಾಂಸ್ಕೃತಿಕ ಮತ್ತು ಆಧ್ಯಾತ್ಮಿಕ ಮಹತ್ವವನ್ನು ಹೊಂದಿರುವ ದಿನವಾಗಿದೆ. ಈ ಹಬ್ಬವನ್ನು ಆಚರಿಸುವ ಮುನ್ನವೇ ಜನರು ತಮ್ಮ ಮನೆಗಳನ್ನು ಸ್ವಚ್ಛಗೊಳಿಸಲು, ಹೊಸ ಬಟ್ಟೆಗಳನ್ನು ಧರಿಸಲು ಮತ್ತು ತಮ್ಮ ಸುತ್ತಮುತ್ತಲಿನ ಪ್ರದೇಶಗಳನ್ನು ಅಲಂಕರಿಸಲು ತಮ್ಮನ್ನು ತೊಡಗಿಸಿಕೊಳ್ಳುತ್ತಾರೆ. ಹೊಸ ವರ್ಷವನ್ನು ಹೊಸ ದೃಷ್ಟಿಕೋನ ಮತ್ತು ನವೀಕೃತ ಉತ್ಸಾಹದಿಂದ ಪ್ರಾರಂಭಿಸುವ ಆಲೋಚನೆಯನ್ನು ಹೊಂದಿರುತ್ತಾರೆ.

**ಹೊಸ ಆರಂಭದ ಸಂಕೇತ :** ಹಿಂದೂ ಕ್ಯಾಲೆಂಡರ್ ಪ್ರಕಾರ ಯುಗಾದಿಯನ್ನು ಹೊಸ ವರ್ಷದ ದಿನವಾಗಿ ಆಚರಿಸಲಾಗುತ್ತದೆ. ಈ ಹಬ್ಬವು ಹೊಸ ಯುಗದ ಆರಂಭವನ್ನು ಸಂಕೇತಿಸುತ್ತದೆ, ಏಕೆಂದರೆ ಬ್ರಹ್ಮಾಂಡದ ಸೃಷ್ಟಿಕರ್ತನಾದ ಬ್ರಹ್ಮನು ಈ ಮಂಗಳಕರ ದಿನದಂದು ಸೃಷ್ಟಿ ಪ್ರಕ್ರಿಯೆಯನ್ನು ಪ್ರಾರಂಭಿಸಿದನು ಎಂಬುದು ಈ ಹಬ್ಬಕ್ಕೆ ಸಂಬಂಧಿಸಿದ ಪೌರಾಣಿಕ ನಂಬಿಕೆಯಾಗಿದೆ.

**ಜ್ಯೋತಿಷ್ಯ ಮಹತ್ವ :** ಮುಂಬರುವ ವರ್ಷದ ಭವಿಷ್ಯವಾಣಿಗಳ ಬಗ್ಗೆ ತಿಳಿಯಲು ಜನರು ಜ್ಯೋತಿಷಿಗಳನ್ನು ಸಂಪರ್ಕಿಸುವ ಅಥವಾ ಪಂಚಾಂಗವನ್ನು ಓದುವ ಸಮಯವೂ ಯುಗಾದಿಯಾಗಿದೆ. ಯುಗಾದಿಯ ಸಮಯದಲ್ಲಿ ಗ್ರಹಗಳ ಸ್ಥಾನವು ಮುಂಬರುವ ವರ್ಷದಲ್ಲಿ ಒಬ್ಬ ವ್ಯಕ್ತಿಯ ಜೀವನದ ಮೇಲೆ ಹೇಗೆ ಪ್ರಭಾವ ಬೀರಬಹುದು ಎಂಬುದನ್ನು ತಿಳಿದುಕೊಳ್ಳಲು ಈ ಹಬ್ಬದಂದು ಮುಂದಾಗುತ್ತಾರೆ.

▸▸ **ಸವಿತಾ ನಾಯ್ಕ್, ಬೆಂಗಳೂರು.**

## ಕರ್ನಾಟಕ ಸರ್ಕಾರ (ಸಹಕಾರ ಇಲಾಖೆ)

**ಸಹಕಾರ ಸಂಘಗಳ ನಿಬಂಧಕರ ಕಛೇರಿ, ನಂ.1, ಆಲಿ ಆಸ್ಕರ್ ರಸ್ತೆ, ಬೆಂಗಳೂರು–52**

**ಸಂಖ್ಯೆ: ಆರ್‌ಸಿಎಸ್/ಆರ್‌ಎಸ್‌ಆರ್/ ಎಕ್ಸ್‌ಂಪಿ/161/2024–25** **ದಿನಾಂಕ: 10–01–2025**

**ಸುತ್ತೋಲೆ–286**

ವಿಷಯ : ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 102 ಮತ್ತು 103 ರಡಿ ನಿರ್ದಿಷ್ಟವಾಗಿ ನಿರ್ದೇಶನ ನೀಡಿ, ಹೊರಡಿಸುವ ಆದೇಶಗಳನ್ನು ಕರ್ನಾಟಕ ನೋಂದಣಿ ನಿಯಮಗಳನ್ನು 1965ರ ನಿಯಮ17(ı) ಕಚಿಡಿಣ–ಗಿı ರಲ್ಲಿನ ಉಪಬಂಧಗಳಂತೆ ಪರಿಗಣಿಸಿ, ಉಪನೋಂದಣಿ ಕಛೇರಿಗಳಲ್ಲಿನ ಸ್ವತ್ತಿನ ವಿವರಣ ಸೂಚಿಗಳಲ್ಲಿ ಋಣಭಾರವನ್ನು ದಾಖಲಿಸುವ ಅಥವಾ ಋಣಭಾರವನ್ನು ತೆಗೆಯುವ ಕುರಿತು.

ಓದಲಾಗಿದೆ : ಸರ್ಕಾರದ ಉಪ ಕಾರ್ಯದರ್ಶಿ, ಕಂದಾಯ ಇಲಾಖೆ (ವಿ.ನಿ.ನೋಂದಣಿ ಮತ್ತು ಮುದ್ರಾಂಕ) ರವರ ಸುತ್ತೋಲೆ ಸಂಖ್ಯೆ: ಕಂಇ/89/ಎಂಎನ್‌ಎಸ್‌ಎ/2024 ದಿ: 19–12–2024.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕಂದಾಯ ಇಲಾಖೆಯು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ, 1959 ಕಲಂ 102 ಮತ್ತು 103 ರಡಿ ನಿರ್ದಿಷ್ಟವಾಗಿ ನಿರ್ದೇಶನ ನೀಡಿ, ಹೊರಡಿಸುವ ಆದೇಶಗಳನ್ನು ಕರ್ನಾಟಕ ನೋಂದಣಿ ನಿಯಮ 1965ರ ನಿಯಮ 17(i) Part-VI ರಲ್ಲಿನ ಉಪಬಂಧಗಳಂತೆ ಪರಿಗಣಿಸಿ, ಉಪನೋಂದಣಿ ಕಛೇರಿಗಳಲ್ಲಿನ ಸ್ವತ್ತಿನ ವಿವರಣ ಸೂಚಿಗಳಲ್ಲಿ ಋಣಭಾರವನ್ನು ದಾಖಲಿಸುವ ಅಥವಾ ಋಣಭಾರವನ್ನು ತೆಗೆಯುವ ಕುರಿತು ಉಲ್ಲೇಖಿತ ಸುತ್ತೋಲೆಯ ಮೂಲಕ ರಾಜ್ಯದ ಎಲ್ಲಾ ಉಪ ನೋಂದಣಿ ಕಛೇರಿಗಳಿಗೆ ಈ ಮುಂದಿನಂತೆ ಸೂಚಿಸಿರುತ್ತಾರೆ. “Part-VI- Copies of the Court order directing the concerned Sub-Registrar to make a note of charge or encumbrance of the party or surety and it's extinguishment on the immovable property, concerning the amount due or the surety amount, in the indices prescribed under the Act”.

ಮುಂದುವರೆದು, ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 102 ಮತ್ತು 103ರಲ್ಲಿನ ಉಪಬಂಧಗಳನ್ವಯ ಸಹಕಾರ ಸಂಘಗಳ ನಿಬಂಧಕರು ಸ್ಥಿರಾಸ್ತಿಗಳಿಗೆ ಸಂಬಂಧಿಸಿದ ದಾಖಲೆಗಳಲ್ಲಿ ಋಣಭಾರಗಳನ್ನು ದಾಖಲಿಸುವಂತೆ ಸಂಬಂಧಪಟ್ಟ ಉಪನೋಂದಣಾಧಿಕಾರಿಗಳಿಗೆ ನಿರ್ದೇಶನ ನೀಡಿ ಹೊರಡಿಸುವ ಆದೇಶಗಳನ್ನು ಮೇಲಿನ ನಿಯಮದಲ್ಲಿ ಉಲ್ಲೇಖಿಸಿರುವ `Court' ವ್ಯಾಖ್ಯಾನದ ಅಡಿಯಲ್ಲಿ ಪರಿಗಣಿಸಿ ಉಪನೋಂದಣಿ ಕಚೇರಿಗಳಲ್ಲಿನ ಸ್ವತ್ತಿನ ವಿವರಣಾ ಸೂಚಿಯಲ್ಲಿ ಋಣಭಾರಗಳನ್ನು ದಾಖಲಿಸುವ ಕುರಿತು ಕಾನೂನು ಇಲಾಖೆಯು ಈ ಕೆಳಕಂಡಂತೆ ಅಭಿಪ್ರಾಯ ನೀಡಿರುತ್ತದೆ:

The above provisions make it clear that the Registrar of Co-Operative Societies does exercise the powers of Civil Court under the above provisions. When an attachment of any property is made it is absolutely essential that such attachment should become an encumbrance in the Revenue records. Otherwise, there is every possibility of a defaulter alienating the attached property to defeat any award passed by the competent authority. Therefore, entering the encumbrance in the revenue records is required.

From the above provisions i.e., 102 and 103 of Co-Operative Societies Act it is clear that even if the Registrar of Co-Operative Societies is a quasi-judicial body it still exercises the powers of civil court. Therefore, for the limited purpose of Rule 17 (i) Part VI of Karnataka Registration Rules the orders of Charge or Encumbrance passed by the Registrar can be interpreted as that of ‘Court’ is the opinion of the Law Department.

ಈ ಹಿನ್ನೆಲೆಯಲ್ಲಿ ಸಹಕಾರ ಸಂಘಗಳ ನಿಬಂಧಕರು ಸ್ಥಿರಾಸ್ತಿಗಳಿಗೆ ಸಂಬಂಧಿಸಿದಂತೆ, ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ, 1959 ಕಲಂ 102 ಮತ್ತು 103 ರಡಿ ನಿರ್ದಿಷ್ಟವಾಗಿ ನಿರ್ದೇಶನ ನೀಡಿ, ಹೊರಡಿಸುವ ಆದೇಶಗಳನ್ನು ಕರ್ನಾಟಕ ನೋಂದಣಿ ನಿಯಮಗಳು 1965ರ ನಿಯಮ 17(ı) ಕಚಿಡಿಣ–ಗಿı ರಲ್ಲಿನ ಉಪಬಂಧಗಳಂತೆ ಪರಿಗಣಿಸಿ, ಉಪನೋಂದಣಿ ಕಛೇರಿಗಳಲ್ಲಿನ ಸ್ವತ್ತಿನ ವಿವರಣ ಸೂಚಿಗಳಲ್ಲಿ ಋಣಭಾರವನ್ನು ದಾಖಲಿಸುವ ಅಥವಾ ಋಣಭಾರವನ್ನು ತೆಗೆಯುವ ಕುರಿತು ನಿಯಮಾನುಸಾರ ಮುಂದಿನ ಅಗತ್ಯ ಕ್ರಮಗಳನ್ನು ಕೈಗೊಳ್ಳಲು ರಾಜ್ಯದ ಎಲ್ಲಾ ಉಪನೊಂದಣಾಧಿಕಾರಿಗಳಿಗೆ ಸೂಚಿಸಿರುತ್ತಾರೆ. ಸುತ್ತೋಲೆ ಪ್ರತಿ ಲಗತ್ತಿಸಲಾಗಿದೆ.

ಸಹಕಾರ ಇಲಾಖೆಯ ಅಧಿಕಾರಿಗಳು ಮೇಲಿನ ಸುತ್ತೋಲೆಯಂತೆ ಕ್ರಮ ವಹಿಸುವ ಬಗ್ಗೆ ಈ ಕೆಳಕಂಡ ನಿರ್ದೇಶನಗಳನ್ನು ನೀಡಿದೆ.

- ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 102 ಮತ್ತು 103ರಡಿ ನಿರ್ದಿಷ್ಟವಾಗಿ ನಿರ್ದೇಶನ ನೀಡಿ ಹೊರಡಿಸುವ ಆದೇಶಗಳನ್ನು ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳು ಉಲ್ಲೇಖಿತ ಸುತ್ತೋಲೆಯಂತೆ ಉಪನೋಂದಣಾಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿ ಋಣಭಾರವನ್ನು ದಾಖಲಿಸುವ ಅಥವಾ ಋಣಭಾರವನ್ನು ತೆಗೆಯುವ ಕುರಿತು ನಿಯಮಾನುಸಾರ ಕ್ರಮವಹಿಸಲು ಸೂಚಿಸಿದೆ.
- ಈಗಾಗಲೇ ಆದೇಶ ಹೊರಡಿಸಿರುವ ಆದೇಶ ಪ್ರತಿಗಳನ್ನು ಉಪನೋಂದಣಾಧಿಕಾರಿಗಳಿಗೆ ಸಲ್ಲಿಸಿ ಈ ಕುರಿತು ಕ್ರಮವಹಿಸುವಂತೆ ಹಾಗೂ ಕ್ರಮವಹಿಸಿರುವ ಬಗ್ಗೆ ಅಂಕಿಅಂಶಗಳೊಂದಿಗೆ ಅನುಪಾಲನ ವರದಿಯನ್ನು ಸಂಬಂಧಪಟ್ಟ ಎಲ್ಲಾ ಪ್ರಾಂತೀಯ ಸಹಕಾರ ಸಂಘಗಳ ಜಂಟಿ ನಿಬಂಧಕರುಗಳಿಗೆ ಸಲ್ಲಿಸಲು ಸೂಚಿಸಿದೆ.
- ಎಲ್ಲಾ ಪ್ರಾಂತೀಯ ಸಹಕಾರ ಸಂಘಗಳ ಜಂಟಿ ನಿಬಂಧಕರುಗಳು ಉಲ್ಲೇಖಿತ ಸುತ್ತೋಲೆಯಂತೆ ಕ್ರಮ ವಹಿಸಿರುವ ಮತ್ತು ಕ್ರಮವಹಿಸುತ್ತಿರುವ ಬಗ್ಗೆ ಮಾಹೆವಾರು ಕ್ರೋಢೀಕೃತ ವರದಿಯನ್ನು ಕೇಂದ್ರ ಕಛೇರಿಗೆ ಸಲ್ಲಿಸಲು ಸೂಚಿಸಿದೆ.
- ಕೇಂದ್ರ ಕಛೇರಿಯ ವ್ಯಾಜ್ಯ ಶಾಖೆಯ ಅಧಿಕಾರಿ/ ಸಿಬ್ಬಂದಿಗಳು ಉಲ್ಲೇಖಿತ ಕ್ರಮದ ಕುರಿತು ನಿರ್ವಹಣೆ ಮಾಡಲು ಸೂಚಿಸಿದೆ.

ಸಹಿ/–

**(ಟಿ.ಹೆಚ್.ಎಂ. ಕುಮಾರ್. ಭಾ.ಆ.ಸೇ)**

ಸಹಕಾರ ಸಂಘಗಳ ನಿಬಂಧಕರು, ಕರ್ನಾಟಕ ರಾಜ್ಯ, ಬೆಂಗಳೂರು